(ಜಿ) ೧೯೮೭ರ ಕರ್ನಾಟಕ ವಿಧಾನ ಮಂಡಲದ ವೇತನ ನಿವೃತ್ತಿ ವೇತನ ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕ

ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ೧೯೮೭ರ ಕರ್ನಾಟಕ ವಿಧಾನ ಮಂಡಲದ ವೇತನ, ನಿವೃತ್ತಿ ವೇತನ ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯಂ ವಂಂದೆ ಮಂಡಿಸಲು ತಮ್ಮ ಅನುಮತಿ ಕೋರಂತ್ತೇನೆ.

ಅಧ್ಯಕ್ಷರು.—ಪ್ರಸ್ತಾವ ಏನೆಂದರೆ ..೧೯೮೭ರ ಕರ್ನಾಟಕ ವಿಧಾನ ಮಂಡಲದ ವೇತನ, ನಿವೃತ್ತಿ ವೇತನ ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ ೧೯೮೭ರ ಕರ್ನಾಟಕ ವಿಧಾನ ಮಂಡಲದ ವೇತನ ನಿವೃತ್ತಿ ವೇತನ ಮತ್ತು ಭತ್ಯೆಗಳ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು.—ವಿಧೇಯಕವನ್ನು ಮಂಡಿಸಲಾಗಿದೆ. *

೧೯೮೮ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕ

ಪರ್ಯಾಲೋಚನಾ ಪ್ರಸ್ತಾಪ

ಶ್ರೀ ಎ ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಮಾನ್ಯ ಮುಖ್ಯಮಂತ್ರಿಗಳ ಪರವಾಗಿ, ಅಧ್ಯಕ್ಷರೇ ೧೯೮೮ನೇ ಇಸವಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಸಭೆಯು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮಂತ್ರಿಗಳು).—ಸನ್ಮಾನ್ಯ ಅಧ್ಯಕ್ಷರೇ, ಈ ತಿದ್ದುಪಡಿ ವಿಧೇಯಕ ಒಹಳ ಸರಳವಾದುದು ಕನ್ನಡ ಭಾಷೆಯಲ್ಲಿ ತಯಾರಾಗತಕ್ಕಂತಹ ಚಲನಚಿತ್ರಗಳಿಗೆ ತೆರಿಗೆಯನ್ನು ಪಾವತಿ ಮಾಡುವುದರಲ್ಲಿ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ತೆರಿಗೆಯನ್ನು ಕಡಿಮೆ ಮಾಡತಕ್ಕ ಒಂದು ಪ್ರಸ್ತಾವನೆ ಇದು. ಇದನ್ನು ಆಧ್ಯಾದ್ವೇಶವಾಗಿ ಹೊರಡಿಸಲಾಗಿದೆ ಇದು ಕನ್ನಡ ಚಲನ ಚಿತ್ರ ಉದ್ಯಮಕ್ಕೆ ಸಹಾಯಕವಾದುದು. ಈ ತಿದ್ದುಪಡಿ ವಿಧೇಯಕದಲ್ಲಿ ಎಲ್ಲಾ ವಿವರಗಳನ್ನು ಕೊಡಲಾಗಿದೆ. ಮಾನ್ಯ ಸಭೆ ಇದಕ್ಕೆ ಸರ್ವಾನು ಮತದಿಂದ ಒಪ್ಪಿಗೆ ಕೊಡಬೇಕು ಎಂದು ಮನವಿ ಮಾಡುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಸಚಿವರು ಈ ಸದನದಲ್ಲಿ ಮಂಡಿಸಿರತಕ್ಕಂಥ ಈ ತಿದ್ದುಪಡಿ ಮಸೂದೆಯನ್ನು ಸ್ವಾಗತಿಸಿ ಈ ಬಗ್ಗೆ ಮಾತನಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಚಿವರು ವಿವರಗಳಿಗೆ ಹೋಗದಿದ್ದರೂ ಕೂಡ ಮುಖ್ಯವಾಗಿ ಹೇಳಿರತಕ್ಕಂಥನ್ನು ಕೆಲವು ರಿಯಾಯಿತಿಗಳ ಬಗ್ಗೆ ಈ ಷೋ ಟ್ಯಾಕ್ಸ್ ಏನು ಇದೆ, ಅದರಲ್ಲಿ ಮನರಂಜನಾ ತೆರಿಗೆಗೆ ಸಂಬಂಧಪಟ್ಟ ಹಾಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿದ್ದಾರೆ ಎನ್ನತಕ್ಕಂಥ ಮಾತು ನಿಜ.

---

* ANNEXURE

ಮೊದಲು ಇವರು ಹೇಳಿರುವ ಹಾಗೆ ಕಾನೂನಿನಲ್ಲಿ ಕನ್ನಡ ಭಾಷೆ, ಕೊಂಕಣಿ ಭಾಷೆ ತುಳು ಮತ್ತು ಕೊಡವ, ಕೂರ್ಗ್ ಲಾಂಗ್ವೇಜ್ ಇವುಗಳಿಗೆ ರಿಯಾಯಿತಿ ಇದೆ, ಇದರಲ್ಲಿ films produced outside the State of Karnataka and which hava secured Censor Certificate of the Central Board of Film Certification ಹಾಗೆ ಪಡೆದಿರತಕ್ಕಂಥ ಚಿತ್ರಗಳಿಗೆ ಕೆಲವು ರಿಯಾಯಿತಿಗಳನ್ನು ಕೊಟ್ಟಿರತಕ್ಕ ವಿಚಾರ ಇಲ್ಲಿ ಇದು ಬಂದೇ ಇಲ್ಲ, ನಿಜವಾಗಿ ಹೇಳಬೇಕೆಂದರೆ, ಮೊದಲು ಇರತಕ್ಕಂಥ ರೇಟು ಸಿಕ್ಕಾಪಟ್ಟೆ ಇಟ್ಟಿದ್ದಾರು.೪೦ ರೂಪಾಯಿ, ೬೦ ರೂಪಾಯಿ ೧೦೦ ರೂಪಾಯಿ ೧ ೫೦ ಪೈಸೆ ಇರತಕ್ಕದಕ್ಕೆ ಎಷ್ಟು ? ೧.೫೦ಕ್ಕಿಂತ ಮೇಲಿದ್ದು ೨.೫೦ಕ್ಕೆ ಇದ್ದಾಗ ಎಷ್ಟು ? ಆ ಮೇಲೆ ೨ ೫೦ಕ್ಕೆ ಎಷ್ಟು ? ಎನ್ನತಕ್ಕ ವಿಚಾರ ಈಗ ಇದು ಎಷ್ಟು ಕಡಿಮೆ ಆಗಿದೆ ಎನ್ನತಕ್ಕ ವಿಚಾರ. ಇದು ಎಷ್ಟು ಕಡಿಮೆ ಆಗಿದೆ ಎಂದರೆ ೧೦ ರೂಪಾಯಿ ೧೫ ರೂಪಾಯಿಗಳ ಮತ್ತು ೨೫ ರೂಪಾಯಿಗಳಿಗೆ ಕಡಿಮೆ ಆಗಿದೆ. ಇದು ಸ್ವಾಗತ ಮಾಡತಕ್ಕಂಥದ್ದು ಈ ವಿಚಾರದಲ್ಲಿ ಕರ್ನಾಟಕ ಫಿಲ್ಮ್ ಛೇಂಬರ್ ಆಫ್ ಕಾಮರ್ಸ್ ಏನಿದೆ, ಇವರು ಇದರ ಬಗ್ಗೆ ಒಂದು ದೊಡ್ಡ ತೀರ್ಮಾನವನ್ನು ಮಾಡಿ ಸರ್ಕಾರಕ್ಕೆ ಅನೇಕ ದಿನಗಳಿಂದ ಒತ್ತಡ ತರಂತ್ತಿದ್ದಾರೆ. ಇದರ ಬಗ್ಗೆ ಪ್ರೊಡ್ಯೂಸರ್‌ಗಳು, ಎಕ್ಸಿಬಿಟರ್ಸ್ ಎಲ್ಲರೂ ಕೂಡ ಈ ಫಿಲ್ಮ್ ಇಂಡಸ್ಟ್ರೀಸ್ ಅನ್ನು ನಡೆಸುವ ಬಗ್ಗೆ ಸರ್ಕಾರಕ್ಕೆ ಬಹಳ ದಿನಗಳಿಂದ ಪದೇ ಪದೇ ಮನವಿಗಳ ಮುಖಾಂತರ,ಅಧಿಕಾರಿಗಳೊಡನೆ ಚರ್ಚೆ ಮುಖಾಂತರ ಭೇಟಿಯು ಮುಖಾಂತರ ಮನವರಿಕೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಆದರೂ ಕೂಡ ಅವರ ಪ್ರಯತ್ನ ಫಲಿಸಲಿಲ್ಲ. ಸರ್ಕಾರಕ್ಕೆ ಅವರು ಅಂತಿಮ ಎಚ್ಚರಿಕೆಯನ್ನು ಕೊಟ್ಟರು, ಈ ರೀತಿಯಿಂದ ಹೆಚ್ಚು ತೆರಿಗೆ ಹಾಕಿದರೆ ಸರ್ಕಾರಕ್ಕೆ ಬರುವಂತಹ ಆದಾಯ ಕಡಿಮೆ ಆಗುತ್ತದೆ ಎಂದು ಅಂಕಿಅಂಶಗಳ ಮೂಲಕ ಅವರು ತಿಳಿಸಿದರು. ಶ್ರೀ ಪ್ರಕಾಶ್ ಅವರನ್ನು ಮತ್ತು ಮುಖ್ಯಮಂತ್ರಿಗಳನ್ನು ಅವರು ಕಂಡು ಮಾತನಾಡಿದರು. ಸಂಬಂಧಪಟ್ಟ ಅಧಿಕಾರಿಗಳ ಹತ್ತಿರ ಅವರು ಪದೇ ಪದೇ ಮಾತನಾಡಿದರು. ಆದರೂ ಸರ್ಕಾರ ಇದರ ಕಡೆ ಗಮನ ಕೊಡಲಿಲ್ಲ ಈ ಕಾರಣದಿಂದ ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಚಲನಚಿತ್ರ ಮಂದಿರಗಳಲ್ಲಿಯೂ ಪ್ರದರ್ಶನಗಳನ್ನು ನಿಲ್ಲಿಸಬೇಕೆಂದು ಅವರು ತೀರ್ಮಾನ ತೆಗೆದು ಕೊಂಡರು. ಆ ಸಮಯದಲ್ಲಿ ಕೇವಲ ಕನ್ನಡ ಚಿತ್ರಗಳು ಮಾತ್ರವಲ್ಲ, ತಮಿಳು, ತೆಲಗು, ಹಿಂದಿ ಹಾಗೂ ಇತರೇ ಭಾಷಾ ಚಿತ್ರಗಳ ಪ್ರದರ್ಶನಗಳು ಸಹ ಬಂದ್ ಆದವು. ಅನೇಕ ದಿನಗಳವರೆಗೆ ಎಲ್ಲಾ ಚಲನಚಿತ್ರ ಮಂದಿರಗಳ ಬಾಗಿಲುಗಳನ್ನು ಮುಚ್ಚಿದರು. ಇದರಿಂದ ಸರ್ಕಾರಕ್ಕೆ ಈ ಬಾಬಿನಿಂದ ಪ್ರತಿನಿತ್ಯ ಬರುತ್ತಿದ್ದ ಲಕ್ಷಾಂತರ ರೂಪಾಯಿಗಳಷ್ಟು ವರವಾನ ನಿಂತುಹೋಯಿತು ಇಂತಹ ಸಮಸ್ಯೆಗಳು ಬಂದಾಗ ಮುಂದಿನ ಭವಿಷ್ಯದ ಬಗ್ಗೆಯೂ ಸಹ ಯೋಚನೆ ಮಾಡಬೇಕಾಗುತ್ತದೆಂಬುದನ್ನು ನಾನು ಒಪ್ಪುತ್ತೇನೆ, ನಾನು ಈ ಸಂದರ್ಭದಲ್ಲಿ ಕೇವಲ ಕನ್ನಡ ಚಲನಚಿತ್ರಗಳಿಗೆ ಮಾತ್ರ ಸೀಮಿತಗೊಳಿಸಿ ಮಾತನಾಡುವುದಿಲ್ಲ, ಏಕೆಂದರೆ, ನಮ್ಮ ರಾಜ್ಯದಲ್ಲಿ ಕೊಂಕಣಿ, ಕೊಡವ, ತುಳು ಭಾಷೆಗಳನ್ನು ಮಾತನಾಡುವಂತಹ ಅಲ್ಪಸಂಖ್ಯಾತರು ಏನಿದ್ದಾರೆ ಅವರೂ ಸಹ ತಮ್ಮ ತಮ್ಮ ಭಾಷೆಗಳಲ್ಲಿ ಚಲನಚಿತ್ರಗಳನ್ನು ತೆಗೆದಿದ್ದಾರೆ. ಅವುಗಳನ್ನು ಜನರು ನೋಡಿದ್ದಾರೆ ಎಲ್ಲಾ ಕಡೆ ಅವು ಪ್ರದರ್ಶನಗೊಂಡಿವೆ.ಆದ್ದರಿಂದ ಸರ್ಕಾರದವರು ಈ ಭಾಷೆಗಳ ಚಲನಚಿತ್ರಗಳಿಗೂ ಸಹ ಬೆಂಬಲ ಮತ್ತು ಉತ್ತೇಜನ ಕೊಡಬೇಕಾಗುತ್ತದೆ. ಇದು ಸರ್ಕಾರದ ನೀತಿ ಕೂಡ ಆಗಿರಬೇಕು. ಈ ಬಗ್ಗೆ ಕನ್ನಡ ಚಿತ್ರಗಳಿಗೆ ಕೊಟ್ಟ ರೀತಿಯಲ್ಲಿಯೇ ಉತ್ತೇಜನ ಕೊಡಬೇಕೆಂದು ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರು ಸರ್ಕಾರಕ್ಕೆ ತಿಳಿಸಿದ್ದಾರೆ. ಇಲ್ಲದಿದ್ದರೆ ಈ ಭಾಷೆಗಳ ಚಿತ್ರಗಳನ್ನು ತೆಗೆಯುವವರಿಗೆ ತೊಂದರೆ ಆಗುತ್ತದೆ. ನಮ್ಮಲ್ಲಿ ಕೊಂಕಣಿ ಮಾತನಾಡುವ ಜನರು ಬಹಳ ಕಡಿಮೆ ಇದ್ದಾರೆ. ಕಾರವಾರ ಮತ್ತು ದಕ್ಷಿಣಕನ್ನಡ ಜಿಲ್ಲೆಗಳಲ್ಲಿ ಮಾತ್ರ ಈ ಭಾಷೆ ಮಾತನಾಡುವವರಿದ್ದಾರೆ ಅದೇರೀತಿ ಮರಾಠಿ ಮಾತನಾಡುವ ಜನರು ಹೆಚ್ಚಾಗಿ ಬೆಳಗಾಂ ಭಾಗದಲ್ಲಿದ್ದಾರೆ. ಕೊಡವ ಭಾಷೆಯನ್ನು ಮಾತನಾಡುವ ಜನರು ಕೊಡಗು ಜಿಲ್ಲೆಯಲ್ಲಿದ್ದಾರೆ. ತುಳು ಭಾಷೆ ಏನಿದ್ದರೂ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾತ್ರ ಚಾಲ್ತಿಯಲ್ಲಿದೆ. ಉಡುಪಿಯ ನಂತರ ಕುಂದಾಪುರ ಬೈಂದೂರು, ಭಟ್ಕಳ ಮುಂತಾದ ಕಡೆಗಳಲ್ಲಿ ಆದರೆ ಕೊರ್ಗ ಗಡಿಯವರೆಗೆ ಈ ತುಳು ಭಾಷೆಯನ್ನು ಜನರು ಮಾತನಾಡುತ್ತಾರೆ. ನಮ್ಮ ಪಕ್ಷದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಸದಸ್ಯರು ಹೆಚ್ಚಾಗಿದ್ದಾರೆ, ಇವರೆಲ್ಲರೂ ಒಂದೆಡೆ ಸೇರಿದರೆ ಸಾಕು, ತುಳು ಭಾಷೆಯಲ್ಲಿ ಮಾತನಾಡಲು ಪ್ರಾರಂಭ ಮಾಡುತ್ತಾರೆ. ಇವರ ಜೊತೆಯಲ್ಲಿ ಕನ್ನಡಭಾಷೆ ಮಾತನಾಡುವ ಸದಸ್ಯರು ಒಬ್ಬರು ಇದ್ದರೂ ಸಹ ಕನ ಡದಲ್ಲಿಯೇ ಎಲ್ಲರೂ ಮಾತನಾಡಬೇಕೆಂಬ ಪರತ್ನವನ್ನು ನಾವು ಹಾಕಿಕೊಂಡಿದ್ದರೂ ಸಹ ಕೆಲವು ಸಲ ಕೆಲವರು ಈ ಪರತ್ನವನ್ನು ಮೀರಿದು ತುಳು ಭಾಷೆಯಲ್ಲಿಯೇ ಮಾತನಾಡುತ್ತಾರೆ. ನನಗೆ ತುಳು ಭಾಷೆ

ಬರುವುದಿಲ್ಲ. 'ದುಂಬ್ ಪೋಲೆ' ಮಾರಾಯ್ರೆ ಎಂದು ಹೇಳುತ್ತಾರೆ. ನೀವು ಮುಂದೆ ಹೋಗಿ ಮಾರಾಯ್ರೆ ಎನ್ನುವುದಕ್ಕೆ ಬದಲು ಈ ರೀತಿ ಹೇಳುತ್ತಾರೆ. ಆದುದರಿಂದ ಅಲ್ಲಿ ಅವರ ಮಾತೃಭಾಷೆ ತುಳು ಭಾಷೆ. ತುಳು ಭಾಷೆಯಲ್ಲಿ ಚಲನಚಿತ್ರವನ್ನು ತೆಗೆದಾಗ ಆದಕ್ಕೆ ಹೆಚ್ಚಿನ ಹಣವನ್ನು ಇನ್ವೆಸ್ಟ್ ಮಾಡುವುದಕ್ಕಾಗುವುದಿಲ್ಲ. ಕಡಿಮೆ ಖರ್ಚಿನಲ್ಲಿ ಚಲನಚಿತ್ರ ತೆಗೆಯಬೇಕಾಗುತ್ತದೆ. ಈಗ ರಾಷ್ಟ್ರಪ್ರಶಸ್ತಿ ಪಡೆದಿರತಕ್ಕ ಬಂಗಾಳಿ ಭಾಷೆಯ ಚಿತ್ರವಾದರೂ ನಾವು ನೋಡುವುದಕ್ಕೆ ಹೋಗುತ್ತೇನೆ. ಈ ಭಾಷೆ ನಮಗೆ ಗೊತ್ತಾಗುವದಿಲ್ಲ ಆದರೂ ಕೆಲವೊಮ್ಮೆ ನೋಡುತ್ತೇವೆ. ಆದರೆ ತುಳು ಭಾಷೆಯ ಕೆಲವು ಪದಗಳ ಪರಿಚಯ ಇರತಕ್ಕಂಥ ಜನ ತುಳು ಭಾಷೆಯ ಚಿತ್ರವನ್ನು ನೋಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ತುಳು ಭಾಷೆಯ ಚಿತ್ರವನ್ನು ಕಡಿಮೆ ಖರ್ಚಿನಲ್ಲಿ ತೆಗೆಯಬೇಕು. ಇತ್ತೀಚೆಗೆ ಪೊಟ್ಯಾಕ್ಸ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಜಾಸ್ತಿ ಮಾಡಿಬಿಟ್ಟಿರಿ. ತಮಗೆ ಗೊತ್ತಿರುವಹಾಗೆ ಮೊದಲು ಟಿ ಸಿನಿಮಾ ಟಿಕೆಟ್ಟಿನ ದರ ಕಡಿಮೆ ಇತ್ತು. ಈಚೆಗೆ ದರ ಜಾಸ್ತಿಯಾಗಿದೆ. ಮಾನ್ಯ ಲಕ್ಷ್ಮೀಸಾಗರ್‌ರವರೆ, ಈ ಇವತ್ತಿನದಿವಸ ಒಂದು ಕುಟುಂಬದವರನ್ನು ಸಿನಿಮಾಕ್ಕೆ ಕರೆದುಕೊಂಡು ಹೋಗಬೇಕು ಅಂದರೆ ಬಹಳ ಕಷ್ಟವಾಗುತ್ತದೆ. ಮಾನ್ಯ ಲಕ್ಷ್ಮೀಸಾಗರ್‌ರವರಿಗೆ ಭೂಮಿಯೇ ಹಾಸಿಗೆ, ಆಕಾಶವೇ ಹೊದಿಕೆ, ಇಡೀ ಮಾನವ ಕುಲವೇ ಅವರ ಕುಟುಂಬ. ದಯವಿಟ್ಟು ಇನ್ನು ಮೇಲಾದರೂ ಒಂದು ಕುಟುಂಬ ಎಂದು ಭಾವನೆ ಮಾಡಿಕೊಳ್ಳಿ. ತಾವು ಕಾನೂನು ಪಂಡಿತರು, ಒಂದು ಕುಟುಂಬ ಅಂದರೆ ಗಿ ಜನ ಎಂದು ತೋರಿಸಿದ್ದೀರಿ ಗಂಡ, ಹೆಂಡತಿ ಮತ್ತು ೩ ಮಕ್ಕಳು.

ಅಧ್ಯಕ್ಷರು.— ಎರಡು ಗಂಡು, ಒಂದು ಹೆಣ್ಣು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಎಲ್ಲರಿಗೂ ೨ ಗಂಡು ಒಂದು ಹೆಣ್ಣು ಆದರೆ ಬಾಕಿಯವರ ಗತಿ ಏನು ?

ಶ್ರೀ ಎಸ್. ಬಂಗಾರಪ್ಪ,— ಮಾನ್ಯ ಅಧ್ಯಕ್ಷರು, ೨ ಗಂಡು, ಒಂದು ಹೆಣ್ಣು ಎಂದು ಹೇಳಿದರು. ೨ ಗಂಡು ಒಂದು ಹೆಣ್ಣು ಅಂದರೆ ಮಾನ್ಯ ಲಕ್ಷ್ಮೀಸಾಗರ್‌ರವರಿತ ತಕರಾರು ಮಾಡುವುದಕ್ಕೆ ಹಕ್ಕು ಇಲ್ಲ, ನಾವು ತಕರಾರು ಮಾಡುತ್ತೇವೆ. ನಿಮಗೆ ಆ ಹಕ್ಕು ಇಲ್ಲ. ಆ ಹಕ್ಕು ತಮಗೆ ಪ್ರಾಪ್ತಿಯಾಗಲಿ ಎಂದು ಹೇಳುತ್ತೇನೆ. ಅದು ದೇವರಿಗೂ, ನಿಮಗೂ ಬಿಟ್ಟಿರತಕ್ಕ ವಿಚಾರ.

ಅಧ್ಯಕ್ಷರು,—ನೀವೂ ಪ್ರಯತ್ನ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಪ್ರಯತ್ನ ಮಾಡುವುದು ಒಳ್ಳೆಯದು.

ಶ್ರೀ ಎ. ಲಕ್ಷ್ಮೀಸಾಗರ್. ಮದುವೆಯಾಗಿರುವವರನ್ನೆಲ್ಲಾ ನೋಡಿದರೆ ನನಗೆ ತುಂಬಾ ಸಂತೋಷವಾಗುತ್ತದೆ. ಅಷ್ಟೇ ಸಂತೋಷ ಸಾಕು ಎಂದು ನಾನು ಸುಮ್ಮನೆ ಕುಳಿತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ,— ಚಲನಚಿತ್ರಗಳಿಗೆ ಪೋಟ್ಯಾಕ್ಸ್, ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಎಲ್ಲಾ ಹಾಕಿದ್ದಾರೆ. ಇದರ ಖರ್ಚು ಒಂದು ಕಡೆ. ನಂತರ ಆಟೋರಿಕ್ಷಾದಲ್ಲೋ ಅಥವಾ ಬಸ್‌ನಲ್ಲೋ ಹೋಗಬೇಕಾದರೆ ಅದರ ಖರ್ಚು ಬರುತ್ತದೆ. ಮಾನ್ಯ ಸಿಂಧ್ಯರವರು ಬಸ್‌ನ ಟಿಕೆಟ್ ದರಗಳನ್ನು ಜಾಸ್ತಿ ಮಾಡಿದ್ದಾರೆ. ಹೀಗಾಗಿ ಒಂದು ಸಾರಿ ಸಿನಿಮಾಕ್ಕೆ ಹೋಗಿ ಬರಬೇಕು ಅಂದರೆ ಕನಿಷ್ಠತ್ತಾಗುತ್ತದೆ. ಬೆಂಗಳೂರು ನಗರದಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೊಗಬೇಕಾದರೆ ಬಹಳ ಕಷ್ಟ. ಈಗಿನ ಕಾಲದಲ್ಲಿ ವೀಡಿಯೋ ಕ್ಯಾಸೆಟ್‌ಗಳು ಬಂದಿವೆ. ಸಾಮಾನ್ಯ ಜನರು ೨೦-೫೫-೩೦-೩೫ ಸಾವಿರ ರೂಪಾಯಿಕೊಟ್ಟು ವಿಡಿಯೊ ತಂದಿಟ್ಟುಕೊಂಡು ನೋಡುವುದಕ್ಕೆ ಸಾಧ್ಯವಿಲ್ಲ. ಹಣವಂತರು ಯಾರದರೂ ವೀಡಿಯೋ ಕ್ಯಾಸೆಟ್ ಹಾಕಿದರೆ ಅಕ್ಕಪಕ್ಕದ ಮನೆಯವರು ಹೋಗಿ ಉಚಿತವಾಗಿ ನೋಡಬಹುದು, ಅಲ್ಲಿ ಜನ ತುಂಬಿಕೊಳ್ಳುತ್ತಾರೆ, ಗ್ರಾಮಾಂತರ ಪ್ರದೇಶದಲ್ಲಿ ಈ ಪರಿಸ್ಥಿತಿ ಇಲ್ಲ. ಗ್ರಾಮಾಂತರ ಪ್ರದೇಶದಲ್ಲಿ, ಹಳ್ಳಿ ಪ್ರದೇಶದಲ್ಲಿ ಕೂಲಿ ಮಾಡತಕ್ಕವರು, ಸ್ವಲ್ಪ ಅವರ ಕಷ್ಟವನ್ನು ಮರೆಯಬೇಕು ಎಂದು ಚಿರನಚಿತ್ರದಲ್ಲಿ ಕಾಣತಕ್ಕ ವೈಭವದ ದೃಶ್ಯಗಳನ್ನು ನೋಡಲು ಹೋಗತಕ್ಕ ಪರಿಸ್ಥಿತಿ ಇದೆ.

೨-೦೦ ಪಿ. ಎಂ.

ಈ ರೀತಿ ಹಳ್ಳಿಯವರು ಹೋಗಿ ಸಿನಿಮಾ ನೋಡಿಕೊಂಡು ಬರುತ್ತಾರೆ. (ಡಿ) ಸೆಂಟರ್ಸ್‌ಗಳು ಏನೇನು ಇವೆ, ಟೂರಿಂಗ್ ಟ್ಯಾಕೀಸ್‌ಗಳು ಏನಿವೆ, ಅಲ್ಲಿ ಅನೇಕ ಹಂತದಲ್ಲಿ ಟ್ಯಾಕ್ಸ್ ಇರುತ್ತದೆ.

ಟ್ಯಾಕ್ಸ್ ಜಾಸ್ತಿಯಾದ ಮೇಲೆ ಇಡೀ ಕನ್ನಡ ಚಿತ್ರ ತಯಾರಿಕೆಗೆ ದೊಡ್ಡ ಪೆಟ್ಟು ಬಿದ್ದಹಾಗೆ ಆಗುತ್ತದೆ. ಇದರ ಬಗ್ಗೆ ಬಹಳ ಒತ್ತಡ ತಂದು ಬೇಡಿಕೆ ಮುಖ್ಯಾಂತರ ಸರ್ಕಾರದ ಮುಂದೆ ಇಟ್ಟರು. ಸರ್ಕಾರ ಇದಕ್ಕೆ ಗಮನಕೊಡಲಿಲ್ಲ. ಆದರೆ, ಎಲ್ಲಾ ಚಲನಚಿತ್ರ ಮುಂದಿರಗಳ ಬಾಗಿಲು ಹಾಕಿದ ಮೇಲೆ ಸರ್ಕಾರದವರು ಕಣ್ಣು ಬಿಟ್ಟರು. ಈ ಒಂದು ವಿಚಾರ ಮಾನ್ಯ ಮುಖ್ಯ ಮಂತ್ರಿಗಳ ಮಟ್ಟಕ್ಕೂ ಹೋಯಿತು, ನಂತರ ದರ ಇಳಿಸಲಾಯಿತು. ನಾನು ಈಗಲೇ ನಿಮಗೆ ಮುನ್ಸೂಚನೆ ಕೊಡುತ್ತೇನೆ- ಒಂದು ಕೈಯಲ್ಲಿ ಕೊಟ್ಟು, ಮತ್ತೊಂದು ಕೈಯಲ್ಲಿ ತೆಗೆದುಕೊಳ್ಳತಕ್ಕ ಪ್ರಯತ್ನ ಮಾಡಬೇಡಿ. ಕನ್ನಡ ಭಾಷೆಗೆ ಸಮ್ಮಕ್ಕು ಕೊಡುತ್ತಿದ್ದೇವೆ. ಬೆಂಬಲ ಕೊಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ಇದು ಬಹಳ ಮುಖ್ಯವಾಗಿರತಕ್ಕ ಕರ್ನಾಟಕ ರಾಜ್ಯದ ಖಜಾನೆಗೆ ಆದಾಯ ಬರತಕ್ಕ ವಿಚಾರ ಇದೆ, ಇವತ್ತು ಭಾರತದಲ್ಲಿ ಹಿಂದಿ ಚಿತ್ರೋದ್ಯಮ ಮೊದಲನೆಯ ಸ್ಥಾನದಲ್ಲಿದೆ. ಎರಡನೆಯ ಸ್ಥಾನ ಮದ್ರಾಸ್‌ಗೆ ಬರುತ್ತದೆ. ಒಂದು ವರ್ಷಕ್ಕೆ ಅನೇಕ ಕೋಟಿ ರೂಪಾಯಿಗಳ ವರಮಾನ ರಾಜ್ಯ ಸರ್ಕಾರಗಳಿಗೆ ಬರುತ್ತದೆ, ಬಾಂಬೆ ಮತ್ತು ಮದ್ರಾಸ್ ನಗರಗಳಲ್ಲಿ ಚಲನಚಿತ್ರೋದ್ಯಮ ಬಹಳ ಮುಂದುವರಿದಿದೆ. ಇವತ್ತು ನಮ್ಮ ಕರ್ನಾಟಕದಲ್ಲಿ ಹಿತಕರವಾದ ವಾತಾವರಣ, ಒಳ್ಳೆಯ ಹವಾಮಾನ ಇರುವುದರಿಂದ ಇಲ್ಲಿ ಹೆಚ್ಚಿನ ಮಟ್ಟದಲ್ಲಿ ಚಿತ್ರೋದ್ಯಮ ಬೆಳೆಯುವುದಕ್ಕೆ ಅವಕಾಶ ಇದೆ. ಇವೊತ್ತು ಬಾಂಬೆ ಮತ್ತು ಮದ್ರಾಸ್ ಪಟ್ಟಣಗಳಲ್ಲಿ ಷೂಟಿಂಗ್ ನಡೆಯುವಂಥ ಸಂದರ್ಭದಲ್ಲಿ ಪೌಡರ್ ಹಚ್ಚಿದರೆ ಬೆವರು ಸುರಿಯುತ್ತದೆ. ೩೦-೩೫-೪೦ ಡಿಗ್ರಿ ಶಾಖ ಇರುತ್ತದೆ, ಆದರೆ our Bangalore city stands on a different footing altogether. ೫ ವರ್ಷಗಳ ಅವಧಿಯಲ್ಲಿ ನೀವು ಕೂಡ ಪ್ರಮಾಣಿಕ ಪ್ರಯತ್ನವನ್ನು ಈ ದಿಸೆಯಲ್ಲಿ ಮಾಡಿದಂತ ಕಾಣಲಿಲ್ಲ. ಕನ್ನಡ ಭಾಷೆಯ ಚಿತ್ರಗಳಿಗೆ ಹೆಚ್ಚಿನ ಮಟ್ಟದಲ್ಲಿ ರಿಯಾಯಿತಿ ಕೊಡಬೇಕಾಗುತ್ತದೆ. ಬೇರೆ ಭಾಷೆಯವರು ಚಿತ್ರ ತೆಗೆಯಲು ಕರ್ನಾಟಕ ರಾಜ್ಯಕ್ಕೆ ಬಂದರೆ, ಅವರಿಗೂ ಅವಕಾಶ ಕೊಡಬೇಕು. ಕಠಿರವ ಸ್ಟುಡಿಯೋ ಇದೆ. ಚಾಮುಂಡೇಶ್ವರಿ ಸ್ಟುಡಿಯೋ ಇದೆ ಇವು ಸಾಕಾಗುವುದಿಲ್ಲ ಸರ್ಕಾರದವರು ಹೆಚ್ಚಿಗೆ ಸ್ಟುಡಿಯೋಗಳನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡಬೇಕು. ಜಮೀನು ಕೊಡುವಾಗ ಪಾರ್ಕಗಳಿಗೆ, ಸ್ಕೂಲುಗಳಿಗೆ, ಆಸ್ಪತ್ರೆಗಳಿಗೆ ಬಿಡುವಂತೆ, ಸ್ಟುಡಿಯೋಗಳಿಗೂ ಜಾಗವನ್ನು ಬಿಡುವಂಥ ಏರ್ಪಾಡು ಮಾಡಬೇಕು. ನಾಳಿನ ಭವಿಷ್ಯತ್ತಿನಲ್ಲಿ ಆದಾಯ ಬರುವಂಥ ಮಾರ್ಗಗಳನ್ನು ಕಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕು.

ಇವೊತ್ತು ತಾವು ತೆರಿಗೆಯನ್ನು ಕಡಿಮೆ ಮಾಡುವುದರಿಂದ ಫಿಲಂ ಇಂಡಸ್ಟ್ರಿ ಬೆಳೆಸಲಿಕ್ಕೆ ಆಗುವುದಿಲ್ಲ. ೬೦ ರೂಪಾಯಿ ಇದ್ದುದನ್ನು ೧೫ ರೂಪಾಯಿ ಮಾಡಿದ್ದೇವೆ, ೪೦ ರೂಪಾಯಿ ಇದ್ದುದನ್ನು ೧೦ ರೂಪಾಯಿ ಮಾಡಿದ್ದೇವೆಂದು ಹೇಳುವುದು ಸುಲಭ ಆದ್ದರಿಂದ, ಸರ್ಕಾರದವರು ಒಂದಂ ಸ್ಕೀಮ್ಸ್ ಮಾಡುವುದಕ್ಕೆ ಮೊದಲು, ಕನ್ನಡ ಫಿಲಂ ಇಂಡಸ್ಟ್ರಿ ಬೆಳೆಯುವುದಕ್ಕೆ ಏನೇನು ಅನ ಕೂಲತೆಗಳು ಬೇಕೂ ಎಂಬುದನ್ನು ಗಮನದ ಟ್ಟುಕೊಂಡು ಆಯವ್ಯಯ ಮಂಡನೆ ಮಾಡುವಾಗ ಅದರಲ್ಲಿ ಸ್ಪಷ್ಟವಾಗಿ ತಿಳಿಸಬೇಕು. ತಾವು ಅದರ ಬಗ್ಗೆ ಯೋಚನೆ ಮಾಡದೇ ಇದ್ದರೆ, ಫಿಲಂ ಇಂಡಸ್ಟ್ರಿಗೆ ಸಂಬಂಧಪಟ್ಟ ಕೆಲಸಕಾರ್ಯಗಳು ಸ್ಥಗಿತವಾಗುವ ಪರಿಸ್ಥಿತಿ ಬಂದಿದೆ ಎನ್ನುವ ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇವೊತ್ತು ಒಂದು ಕನ್ನಡ ಫಿಲಂ ತಯಾರಿಸಬೇಕಾದರೆ ವಿನಿಮಯ ೨೦ಲಕ್ಷ ರೂಪಾಯಿಗಳಿಂದ ೪೦ಲಕ್ಷ ರೂಪಾಯಿಗಳವರೆಗೆ ಖರ್ಚು ಬರುತ್ತದೆಂದು ಹೇಳುತ್ತಾರೆ. ಯಾರೇ ಆದರೂ ಸರಿಯೇ ಇಷ್ಟು ಹಣವನ್ನು ಹಾಕಿದ ಮೇಲೆ ಅವರಿಗೆ ಆ ಹಣ ವಾಪಸ್ಸು ಬರದೇ ಇದ್ದರೆ ಹೇಗೆ? ಅವರು ಇನ್‌ವೆಸ್ಟ್ ಮಾಡತಕ್ಕ ಹಣವಾದರೂ ಬರಬೇಕು ಅಲ್ಲವೇ ಜೊತೆಗೆ ಇವೊತ್ತು ಥಿಯೇಟರ್ಸ್ ಬಾಡಿಗೆಯನ್ನು ನೋಡಿದರೆ ಯಾರೂ ಈ ವಿಚಾರದಲ್ಲಿ ಕೈ ಹಾಕುವುದಕ್ಕೆ ಇಷ್ಟಪಡುವುದಿಲ್ಲ. ಅವರು ಹೇಳಿದಷ್ಟು ಹಣವನ್ನು ಥಿಯೇಟರ್‌ನವರಿಗೆ ಕೊಡಬೇಕಾಗಿದೆ. ಇದರ ಜೊತೆಗೆ ವಿಡಿಯೋ ಹಾವಳಿ ಜಾಸ್ತಿ ಆದರೆ ಇದಕ್ಕೆ ಕ್ಯಾನ್ಸರ್ ರೋಗ ತಗುಲಿದ ಹಾಗೆ ಆಗುತ್ತದೆ. ಈಗ ತಾವು ಒಳ್ಳೆಯ ಕೆಲಸವನ್ನು ಮಾಡಿದ್ದೀರಿ, ಇದನ್ನು ನಾನು ಸ್ವಾಗತ ಮಾಡುತ್ತೇನೆ. ಇದರ ಜೊತೆಯಲ್ಲಿ ತಾವು ಈ ವಾರು ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಮುಂದಿನ ಬರತಕ್ಕ ಆಯವ್ಯಯ ಪಟ್ಟಿಯಲ್ಲಿ ಕನ್ನಡ ಫಿಲಂ ಇಂಡಸ್ಟ್ರಿಗೆ ಹೆಚ್ಚಿನ ಬೆಂಬಲನ್ನು ಕೊಡಬೇಕೆಂದು ಹೇಳಿ, ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಟ್ಕಲ್).—ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ವಿಧೇಯಕವನ್ನು ಈಗಾಗಲೇ ಮಾನ್ಯ ಬಂಗಾರಪ್ಪನವರು ಸ್ವಾಗತ ಮಾಡಿದ್ದಾರೆ. ನಾನೂ ಸಹ ಸ್ವಾಗತ ಮಾಡುತ್ತೇನೆ ಈ ರೀತಿ ಸ್ವಾಗತ ಮಾಡುವಾಗ ಕೆಲವೊಂದು ಸಲಹೆಗಳನ್ನು ಅವರ ಮುಂದೆ ಇಡಲಿಕ್ಕೆ ಇಷ್ಟಪಡುತ್ತೇನೆ. ಮೊನ್ನೆ ಸುಮಾರು ಒಂದು ತಿಂಗಳು ಕಾಲ ಸಿನಿಮಾದವರ ಸ್ಟೈಕ್ ಆದನಂತರ, ಫಿಲಂ ಛೇಂಬರ್ ಆಫ್ ಕಾಮರ್ಸ್ ಅವರು ಸಜೆಸ್ಟ್ ಮಾಡಿದ ಹಾಗೆ ಸರ್ಕಾರ ಮತ್ತು ಅವರ ಮಧ್ಯೆ ಒಪ್ಪಂದ ಆದನಂತರ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನಲ್ಲಿ ಸ್ವಲ್ಪ ಕಡಿಮೆ ಮಾಡಿದ್ದೀರಿ. ಇನ್ನು ಎರಡನೆಯ ವಿಚಾರ ತಿಳಿಸಬೇಕೆಂದರೆ, ಅನೇಕ ಕಡೆಗಳಲ್ಲಿ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನಿಂದ ಬರತಕ್ಕ ರೆವಿನ್ಯೂ ಸೋರಿ ಹೋಗುತ್ತದೆ. ಉದಾಹರಣೆಗೆ ಸೆಣ್ಣೂ ಪಟ್ಟಣ ಆಗಲಿ, ಅಥವಾ ಎಲ್ಲಿಯೇ ಆಗಲಿ, ನಮ್ಮ ಈ ಡಿಪಾರ್ಟ್‌ಮೆಂಟಿನ ಜನ ಎಲ್ಲಿ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡುವುದಿಲ್ಲ, ಅಂತಹ ಕಡೆಗಳಲ್ಲಿ ಟಿಕೆಟ್‌ಗಳನ್ನು ಡೂಪ್ಲಿಕೇಟ್ ಮಾಡಿ ಮೊದಲನೆಯ ಷೋಗೆ ಕೊಟ್ಟ ಟಿಕೆಟ್‌ಗಳನ್ನೇ ರೀ ಕಲೆಕ್ಟ್ ಮಾಡಿಕೊಂಡು ಎರಡನೆಯ ಷೋಗೆ ಅದೇ ಟಿಕೆಟ್ ಕೊಡುವಂಥಾದ್ದು, ನಡೆಯುತ್ತದೆ. ಅಪ್ಪರಲ್ಲಿ ಡಿಪಾರ್ಟ್‌ಮೆಂಟಿನವರು ಏನಾದರೂ ಬಂದು ಚೆಕ್ ಮಾಡಿದರೆ, ಅದೇ ಟಿಕೆಟ್‌ಗಳನ್ನು ತೋರಿಸುತ್ತಾರೆ. ಈ ರೀತಿಯಾಗಿ ಲಕ್ಷಾಂತರ ರೂಪಾಯಿಗಳ ಹಣ ಸೋರಿ ಹೋಗುತ್ತಿದೆ. ಇದು ಅವರಿಗೂ ಗೊತ್ತಿರತಕ್ಕ ವಿಚಾರ, ನಮಗೂ ಗೊತ್ತಿರತಕ್ಕ ವಿಚಾರ. ಮಾನ್ಯ ಮಂತ್ರಿಗಳು ಗಾಂಧೀನಗರದಲ್ಲಿದ್ದಾರೆ, ಕೆಂಪೇಗೌಡ ಟಾಕೀಸ್ ಏರಿಯಾದಲ್ಲಿರುವಷ್ಟು ಚಿತ್ರಮಂದಿರಗಳು ಎಲ್ಲಿಯೂ ಇಲ್ಲ. ಈ ಒಂದು ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ನಿಂದ ಹಣ ಏನು ಸೋರಿಹೋಗುತ್ತದೆ, ಅದನ್ನು ಯಾವರೀತಿ ತಪ್ಪಿಸಬೇಕು, ತೆರಿಗೆ ಹಣ ತಪ್ಪಿಹೋಗದಂತೆ ಯಾವರೀತಿ ಕಲೆಕ್ಟ್ ಮಾಡಬೇಕು ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಯೋಚನೆ ಮಾಡಬೇಕು. ಟ್ಯಾಕ್ಸ್ ಹಾಕುವುದು ಮಾತ್ರ ನಿಮ್ಮ ಕೆಲಸವಲ್ಲ. ಅಥವಾ ಅವರಿಗೆ ರಿಯಾಯಿತಿ ಕೊಡುತ್ತೇವೆ ಎಂದು ಹೇಳುವುದಿಲ್ಲ. ಇಲ್ಲಿ ಕೋಟ್ಯಾಂತರ ರೂಪಾಯಿಗಳ ತೆರಿಗೆ ಏನು ಸೋರಿಹೋಗುತ್ತಿದೆ ಅದನ್ನು ನಿಲ್ಲಿಸುವುದಕ್ಕೆ ಸರ್ಕಾರದವರು ಮೊದಲು ಯೋಚನೆ ಮಾಡಬೇಕು.

ಎರಡನೆಯದಾಗಿ ಸಿನಿಮಾ ಮಂದಿರದವರು ಏನು ಮಾಡುತ್ತಿದ್ದಾರೆಂದರೆ, ನಮಗೆ ಹೆಚ್ಚಿಗೆ ಆದಾಯ ಬರುತ್ತಿಲ್ಲ, ಅಥವಾ ರೆಂಟ್ ಹೆಚ್ಚಿಗೆ ಬರುತ್ತಿಲ್ಲ ಎಂದು ಇರತಕ್ಕ ಟಾಕೀಸ್‌ಗಳನ್ನೆಲ್ಲಾ ಒಡೆದು ಹಾಕಿ ಷಾಪಿಂಗ್ ಕಾಂಪ್ಲೆಕ್ಸ್‌ನ್ನು ಕಟ್ಟಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಸರ್ಕಾರದವರೂ ಕೂಡ ಅನುಮತಿಯನ್ನು ಕೊಡುತ್ತಿದ್ದಾರೆ. ಈ ಸಿನಿಮಾ ಮಂದಿರಗಳನ್ನು ಒಡೆದುಹಾಕುತ್ತಿರುವುದರಿಂದ ಕನ್ನಡ ಚಿತ್ರಗಳನ್ನು ಹಾಕುವುದಕ್ಕೆ ಅವಕಾಶ ಇಲ್ಲದಂತಾಗುತ್ತಿದೆ ಸಿನಿಮಾ ಮಂದಿರಗಳು ಇದ್ದರೆ ಕನ್ನಡ ಚಿತ್ರಗಳನ್ನು ಪ್ರದರ್ಶನ ನೋಡುವುದಕ್ಕೆ ಅವಕಾಶವಾಗುತ್ತದೆ ಅದರಿಂದ ಮನರಂಜನಾ ತೆರಿಗೆ ಸರ್ಕಾರಕ್ಕೆ ಬರುತ್ತದೆ ಆದರೆ ಷಾಪಿಂಗ್ ಕಾಂಪ್ಲೆಕ್ಸ್‌ನ್ನು ಕಟ್ಟಿಸಿದರೆ ಅದರಿಂದ ನಿಮಗೆ ಸೇಲ್ಸ್ ಟ್ಯಾಕ್ಸ್ ಬರಬಹುದು. ಚಿತ್ರಮಂದಿರಗಳಿಂದ ಬರತಕ್ಕ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್ ಹೋಗುತ್ತದೆ. ಕನ್ನಡ ಚಿತ್ರಗಳಿಗೆ ಉತ್ತೇಜನ ಕೊಡಬೇಕೆಂದು ತಾವು ಏನು ಹೇಳುತ್ತಿದ್ದೀರಿ ಅದೇರೀತಿ ಇರತಕ್ಕ ಸಿನಿಮಾ ಮಂದಿರಗಳನ್ನೂ ಕೂಡ ಒಡೆದುಹಾಕಬಾರದೆಂದು ಶಾಸನ ಮಾಡಬೇಕು. ಇದನ್ನು ಮಾಡದಿದ್ದರೆ ನೀವು ಏನು ಮಾಡಿದರೂ ಪ್ರಯೋಜನವಾಗುವುದಿಲ್ಲ. ನಾಳೆ ಪ್ರಭಾವಶಾಲಿಯಾದವನು ಯಾರಾದರೂ ಒಬ್ಬ ಬಂದು ಸರ್ಕಾರದ ಮೇಲೆ ಒತ್ತಡವನ್ನು ತಂದು ಸಿನಿಮಾ ಮಂದಿರವನ್ನು ಒಡೆದು ಷಾಪಿಂಗ್ ಕಾಂಪ್ಲೆಕ್ಸ್‌ನ್ನು ಕಟ್ಟಿಸುತ್ತಾರೆ. ಇಂಥಾದ್ದನ್ನು ತಪ್ಪಿಸಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ, ತಾವು ಟೋಟಲ್ ರಿಲೀಫ್ ಏನು ಕೊಡುತ್ತೀರಿ, ಇದರಲ್ಲಿ ಎಕ್ಸೆಪ್ಶನ್ ಮಾಡಿದ್ದುದು ಎಷ್ಟು? ಮತ್ತು ರಿಲೀಫ್ ಕೊಡತಕ್ಕದ್ದು ಎಷ್ಟು?

On page No. 2 you have given a table as follow:

Sl. No.	Payment for admission (excluding entertainment tax and surcharge) for a person to the class of seat or accomodation per show.)	Rate of tax highest
(a)	does not exceed one rupee and fifty paise	Ten Rupees
(b)	exceed one rupee and fifty paise but does not exceed two rupees and fifty paise	Fifteen Rupees
(c)	exceeds two rupees and fifty paise	Twentyfive rupees

(iii) after the proviso as so amend, the following further proviso shall be inserted, namely.

"Provided also that in respect of theatres paying taxes in the manner specified in section 4A, the tax payable under this sub-section in respect of Cinematograph Show of a Kannada, Kodava, Konkani or Tulu Films shall be at the rates namely.—

Sl. No.	Total payment for admission of a person to the highest class of seat or accomomdation	Rate of tax per show
(a)	does not exceed two rupees and fifty paise	Ten rupees
(b)	exceed two rupees and Fifty paise but does not exceed five rupees	Fifteen rupees
(c)	exceed five rupees	Twentyfive rupees

For this it is better if you give an explanation as to what is th total relief given to these people and what is the amount now you are going to collect.

SRI A. LAKSHMISAGAR.—We have given in the annexure the existing rates at which taxes are being collected. Those details are given in the annexure to the amending bill. It is as follows.

"Provided that in respect of cinema theatres paying tax in the manner specified in Section 4A, the tax under this section shall be paid at the following rates, namely.—

Sl. No.	Total payment for admission of a person to the highest class of seat or accomodation	Rate of tax per show
(a)	does not exceed two rupees and fifty paise	Forty rupees
(b)	exceed two upees and fifty paise but does not exceed five rupees	Sixty rupees
(c)	exceed five rupees	One hundred rupees

In the case of (a) above, it is now reduced to Rs. 1). in the case of (b) it is now reduced to Rs. 15 and in the case of (c), it is now reduced to Rs. 25. This is the range of concession this is already given by the ordinance which was issued after meeting the persons connected with this film show business. Therefore, please realise the sharp concession that has been given to them.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಪೇಜ್ ನಂಬರ್ ೨ರಲ್ಲಿ ಏನು ಕೊಟ್ಟಿದ್ದೀರಿ ಮತ್ತು ಪೇಜ್ ನಂಬರ್ ೭ರಲ್ಲಿ ಟೇಬಲ್ ಏನು ಕೊಟ್ಟಿದ್ದೀರಿ. ಅವರೆತನ್ನು ನೋಡಿದ್ದೇನೆ.' But, I want to know what is the amount, total loss to the Government or total relief you are giving in the form of entertainment tax. ಒಟ್ಟು ಹಣ ಎಷ್ಟು ಬಿಡುಡೆ ಮಾಡುತ್ತಿದ್ದೀರಿ ಅದನ್ನು ರಿಲೀಫ್ ಎಂದು ಕೊಟ್ಟಿದ್ದರೆ ನನಗೆ ಗೊತ್ತಾಗುತ್ತಿತ್ತು. ಒಂದು ಲಕ್ಷವೋ ೨೦ ಲಕ್ಷವೋ ಏನ್ನುವುದು ಗೊತ್ತಾಗುತ್ತಿತ್ತು. ಇದರ ಮೇಲೆ ಏನೂ ಗೊತ್ತಾಗುವುದಿಲ್ಲ. ಎಷ್ಟು ಕಲೆಕ್ಷ್ ಆಗುತ್ತದೆನ್ನುವುದನ್ನ ಕೊಟ್ಟಿದ್ದೀರಿ. ಹಾಗೆಯೇ ಎಷ್ಟು ರಿಲೀಫ್ ಕೊಟ್ಟಿದ್ದೀರಿ ಅದನ್ನು ದಯವಿಟ್ಟು ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ವರ್ಷಕ್ಕೆ ಎರಡು ಕೋಟಿ ರೂಪಾಯಿಗಳು ಎಂದರೆ ಆರು ತಿಂಗಳಿಗೆ ಒಂದು ಕೋಟಿ ರೂಪಾಯಿನಂತೆ ರಿಯಾಯಿತಿಯಿಂದ ಈ ಜನರಿಗೆ ಸಹಾಯವಾಗುತ್ತದೆ. ಅದರ ಜೊತೆಗೆ ಜನಸಂಖ್ಯೆ ಆಧಾರದಮೇಲೆ ಕೊಡುತ್ತಿರುವುದು ಈಗಾಗಲೇ ತಮಗೆ ಗೊತ್ತಿದೆ. ಹತ್ತು ಸಾವಿರ ಜನಸಂಖ್ಯೆ ಇರತಕ್ಕಂಥ ಊರುಗಳಿಗೆ ಏನೂ ಟ್ಯಾಕ್ಸ್ ಹಾಕಿಲ್ಲ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ ಒಟ್ಟು ಸೇಲ್ಸ್ ಏನು ಇರುತ್ತದೆ ಅನ್ನು ತಿಳಿದುಕೊಂಡರೆ ಅವರಿಗೆ ಬರತಕ್ಕಂಥ ಅನುಕೂಲ ಏನು ಎನ್ನುವುದು ತಮಗೆ ಭಾಸವಾಗುತ್ತದೆ

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ ನಾನು ಕೇಳುತ್ತಿರುವ ಉದ್ದೇಶವಾದರೂ ಇಷ್ಟೇ ತಾವು ಎರಡುಕೋಟಿ ರೂಪಾಯಿಗಳಷ್ಟು ರಿಯಾಯಿತಿಯನ್ನು ಒಂದು ವರ್ಷಕ್ಕೆ ಕೊಟ್ಟಿದ್ದೇವೆಂದು ಹೇಳುತ್ತಿರಿ. ಆದರೆ ಇದರಲ್ಲಿ ಅಗತಕ್ಕಂಥ ಡಿಪ್ಲಿಕೇಟ್‌ನ ಪೈಸ. ತದನಂತರ ಕಲೆಕ್ಷನ್‌ನಲ್ಲಿ ಅಗತಕ್ಕಂಥ ಪೈಸ ಇದನ್ನು ಸಾಪತಿಸುವುದಕ್ಕೆ ತಾವು ಯಾವರೀತಿ ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದು ಬಹಳ ಮಹತ್ವದ ಇವೆ ರಿಯಾಯಿತಿ ಕೊಡುವುದರಿಂದ ತಮ್ಮ ಕೆಲಸ ಮುಗಿಯಿತು ಎಂದು ಹೇಳುವುದಲ್ಲ. ಡೂಪ್ಲಿಕೇಟ್ ಟಿಕೆಟ್‌ಗಳನ್ನು ಮಾಡಿ ಮೋಸ ಮಾಡುವುದರಿಂದ ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನಿಂದ ತಪ್ಪಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂಬುದನ್ನು ಈ ಸಂದರ್ಭದಲ್ಲಿ ಹೇಳಿದರೆ ಒಳ್ಳೆಯದೆಂದು ಹೇಳುತ್ತೇನೆ.

ರಿಯಾಯತಿ ಕೊಟ್ಟಿರುವುದೇನೋ ಬಹಳ ಒಳ್ಳೆಯದು ಆದರೆ ಇದರ ಜೊತೆಯಲ್ಲಿ ಲೂಪ್‌ಹೋಲ್ಸ್ ಕಂಡುಹಿಡಿಯುವ ಕಾರ್ಯಕ್ರಮಗಳನ್ನು ತಾವು ಹಾಕಿಕೊಳ್ಳಬೇಕೆನ್ನುವ ಮಾತನ್ನು ಕೂಡ ಹೇಳುತ್ತೇನೆ.

† ಶ್ರೀ ಆರ್. ವೆಂಕಟರಾವಪ್ಪಯ್ಯ (ಬಂಗಳಾಗಿಲು).—ಸನ್ಮಾನ್ಯ ಅಧ್ಯಕ್ಷರೇ ಈ ಚಿತ್ರ ಮಾಡಿರದವರು ಒಂದು ತಿಂಗಳಕಾಲ ಮುಷ್ಕರವನ್ನು ಮಾಡಿದರು. ಈಗ ರಿಯಾಯತಿ ಕೊಟ್ಟಿದ್ದೀರಿ. ಫಿಲಮ್ ಚೆಂಬರ್ ಆಫ್ ಕಾಮರ್ಸ್‌ನವರು ಏನು ಮಾಡಿರುತ್ತಾರೆಂದರೆ ಈ ರಿಯಾಯತಿಯನ್ನು ಕನ್ನಡ-ಕನ್ನಡೇತರ ಚಿತ್ರಗಳೆಂದು ಎರಡು ಭಾಗವಾಗಿ ವಿಂಗಡಿಸಿಕೊಟ್ಟಿರುತ್ತಾರೆ. ನಾನಂ ಹೇಳುವುದೇನೆಂದರೆ ಕನ್ನಡಕ್ಕೆ ರಿಯಾಯತಿಯನ್ನು ಕೊಟ್ಟಿರುವುದಕ್ಕೆ ಸ್ವಾಗತ ಮಾಡುತ್ತೇನೆ. ಅದೇ ರೀತಿಯಲ್ಲಿ ಕನ್ನಡೇತರ ಚಿತ್ರಗಳು ಅಂದರೆ ವಾಣಿಜ್ಯವಾಗಿ ತೆಲಗು ಚಿತ್ರಗಳಿಗೆ ಎಂಟು ಜಿಲ್ಲಗಳಲ್ಲಿ ಬಹಳ ಡಿಮ್ಯಾಂಡ್ ಇರುತ್ತದೆ. ಬೆಂಗಳೂರಿನ ಒಂದು ಭಾಗ, ತುಮಕೂರು, ಬಳ್ಳಾರಿ, ರಾಯಚೂರು, ಮತ್ತು ಗುಲ್ಬರ್ಗಾದ ಒಂದು ಭಾಗ ಚಿತ್ರದುರ್ಗ ತಾಲ್ಲೂಕಿನಲ್ಲಿ ತೆಲಗು ಮಾತನಾಡುವವರು ಇದ್ದಾರೆ. ಆದ್ದರಿಂ ತೆಲಗು ಚಿತ್ರವನ್ನು ನೋಡಬರುವವರಿಗೆ ವಿತಕ್ಕೆ ಅಡ್ಡಿಬರಬೇಕು ? ಕೆ.ಜಿ.ಎಫ್.ನಲ್ಲಿ ತಮಿಳು ಚಿತ್ರವನ್ನು ನೋಡುವವರು ಇರುತ್ತಾರೆ. ಹಾಗೆಯೇ ಹಿಂದಿ ಚಿತ್ರಗಳನ್ನು ನೋಡುವವರು ಇದ್ದಾರೆ ಅದು ರಾಷ್ಟ್ರಭಾಷೆ ಆದಕ್ಕೆ ಎನ್‌ಕರೇಜ್‌ಮೆಂಟ್ ಕೊಡಬೇಕು. ಅದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಮಹಾರಾಷ್ಟ್ರ ಆಂಧ್ರದಲ್ಲಿ ಒಂದು ಯೂನಿಫಾರಮ್ ಸ್ಟ್ಯಾಂಡರ್ಡ್ ಇದೆ. ಇಲ್ಲಿ ವಿತಕ್ಕೆ ಡಿಸ್ಕ್ರಿಮಿನೇಷನ್. ಇಲ್ಲಿ ಡಿಸ್‌ಕ್ರಿಮಿನೇಷನ್ ಮಾಡಿರುವುದು ಬಹಳ ಅನ್ಯಾಯ ಲಕ್ಷಾಂತರ ಭಾಷೆ ಗಳನ್ನು ಆಡುವವರು ಇಲ್ಲಿದ್ದಾರೆ. ಅವರಿಗೆ ತೊಂದರೆಯಾಗುತ್ತದೆ. ಈ ವಿಚಾರ ಡಿಸ್‌ಕಷನ್‌ಗೂ ಕೂಡ ಬಂದಿತ್ತು. ಆಗ ಮಾನ್ಯ ಪ್ರಕಾಶ್‌ರವರು ಇದ್ದರೂ. ಮಾನ್ಯ ಲಕ್ಷ್ಮೀಸಾಗರ್‌ರವರು ಇರಲಿಲ್ಲ ವೆಂದು ಕಾಣುತ್ತದೆ. ಮಾನ್ಯ ಪ್ರಕಾಶ್‌ರವರು ಇದ್ದಿದ್ದರೆ ಅವರು ಒಹ ಚೆನ್ನಾಗಿ ಆರ್ಥ ಮಾಡಿಕೊಳ್ಳುತ್ತಿದ್ದರು. ಸರ್ಕಾರಕ್ಕೆ ನಷ್ಟವಾಗುತ್ತದೆಂದು ಹೇಳುತ್ತೀರಿ. ತೆಲುಗು ತಮಿಳುರು ಇರುವ ಕಡೆ ಆ ಚಿತ್ರಗಳಿಗೆ ಕನ್‌ಸೆಷನ್ ಕೊಟ್ಟಿದ್ದರೆ ಅಷ್ಟೇನೂ ನಷ್ಟವಾಗುತ್ತಿರಲಿಲ್ಲ. ದಯವಿಟ್ಟು ಈಗಲೂ ವಿಚಾರವನ್ನು ತಾವು ಕನ್ಸಿಡರ್ ಮಾಡಿ ಅಲ್ಪಸಂಖ್ಯಾತರು ಬದುಕೀವುದಕ್ಕೆ ಅವಕಾಶ ಕೊಡಿ. ಈಗ ಹಿಂದಿ ನೋಡುವುದಕ್ಕೆ ಅವಕಾಶ ಉಂಟು. ಸಂವಿಧಾನದಲ್ಲೂ ಪ್ರಾವಿಷನ್ ಇದೆ, ನಮ್ಮ ಕೋಲಾರದಲ್ಲಿ ೬೦ ಪರ್ಸೆಂಟ್ ತೆಲುಗಿನವರು ಇದ್ದಾರೆ. ಅವರೇನು ಕನ್ನಡದವರ ಮೇಲೆ ಕುಸ್ತಿಗೆ ಹೋಗುವುದಿಲ್ಲ ಅವರೂ ಸಿನೆಮಾ ನೋಡಬೇಕಾಗುತ್ತದೆ. ಈಗ ನಾಟಕಗಳು ಇಲ್ಲ. ಹಿಂದಿನ ಕಾಲದಲ್ಲಾದರೆ ನಾಟಕಗಳು ಇದ್ದವು. ಈಗ ಇರುವುದು ಸಿನೆಮಾ ಮಾತ್ರ. ಕನ್ನಡದವರು ನೋಡಿದರೆ ಕನ್‌ಸೆಷನ್, ತೆಲುಗಿನವರು ನೋಡಿದರೆ ಕನ್‌ಸೆಷನ್ ಇಲ್ಲವೆಂದು ಹೇಳುವುದು ಅನ್ಯಾಯ. ಕನ್ನಡ ಸಿನೆಮಾ ಎಂದರೆ ೫೦ ಪರ್ಸೆಂಟ್ ರಿಯಾಯತಿ ಕೊಡುತ್ತಾರೆ, ೧೦೦ ಪರ್ಸೆಂಟ್ ರಿಯಾಯಿತಿ ಯನ್ನು ವರ್ಷಕ್ಕೆ ಒಂದು ಸಾರಿಯಾದರೂ ಕೊಡುವುದಿಲ್ಲ. ಮಾನ್ಯ ಲಕ್ಷ್ಮೀಸಾಗರ್‌ರವರು ಕೂಡ ತೆಲುಗಿನವರು. ಈಗ ಕನ್ನಡದವರಾಗಿದ್ದಾರೆ. ಈಗ ಕೊಟ್ಟಿರುತಕ್ಕ ರಿಯಾಯಿತಿಯನ್ನು ಯೂನಿಫಾರಂ ಮಾಡಲಿ. ಕನ್ನಡಕ್ಕೆ ಒಂದು, ತೆಲುಗಿಗೆ ಒಂದು ಕನ್‌ಸೆಷನ್ ಎಂಬುದು ಬೇಡ. ಅವರೇನು ಮಲತಾಯಿ ಮಕ್ಕಳಲ್ಲ. ಅವರು ಕೂಡ ಕನ್ನಡ ನಾಡಿನಲ್ಲಿಯೇ ಇದ್ದಾರೆ ಇವರು ಏನು ತಾರತಮ್ಯ ಮಾಡಿದ್ದಾರೆ ಅದನ್ನು ತಪ್ಪಿಸಿ ಎಲ್ಲರಿಗೂ ಒಂದೇ ಕನ್‌ಸೆಷನ್ ಕೊಡುವಂತಾಗಲಿ ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಯು. ಸಭಾಪತಿ (ಸಂಡೂರು) —ಮಾನ್ಯ ಅಧ್ಯಕ್ಷರೆ, ಪೋ ಟ್ಯಾಕ್ಸನ್ನು ಕಡಿಮೆ ಮಾಡಿರುವುದರ ಬಗ್ಗೆ ವಿರೋಧವಿಲ್ಲ. ಅದನ್ನು ವಿರೋಧ ಮಾಡುವುದು ಸರಿಯಲ್ಲವೆಂದು ತಿಳಿದು ಕೊಂಡಿದ್ದೇನೆ. ಆದರೆ ಒಂದು ಕ್ಲಾರಿಫಿಕೇಷನ್ ಅನ್ನು ಮಾನ್ಯ ಮಂತ್ರಿಗಳು ಕೊಡಬೇಕು. ಹೋದ ಸಾರಿ ಪೋ ಟ್ಯಾಕ್ಸ್ ಜಾಸ್ತಿ ಮಾಡುವಾಗ ಏನು ಹೇಳಿದ್ದಾರೆಂಬುದು ರೆಕಾರ್ಡ್‌ನಲ್ಲಿದೆ. ಅದನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ಹೇಳಿದ್ದರು ನಾವು ಫಿಲಂ ಛೇಂಬರ್ಸ್ ಆಫ್ ಕಾಮರ್ಸ್‌ನವರ ಜೊತೆ ಕನ್‌ಸಲ್ಟ್ ಮಾಡಿ ಒಪ್ಪಿಕೊಂಡಿದ್ದೇವೆ ಮತ್ತು ಅದರಂತೆ ತೆರಿಗೆಯನ್ನು ಜಾಸ್ತಿ ಮಾಡಿದ್ದೇವೆಯೇ ಹೊರತು ಸಿನಿಮಾ ಕೈಗಾರಿಕೆಯ ಮೇಲೆ ಒತ್ತಡ ಹಾಕಬೇಕೆಂದು ಮಾಡಲಿಲ್ಲವೆಂದು ಅವತ್ತು ಹೇಳಿದರು. ಆದಾದ ಕೆಲವು ದಿನಗಳ ನಂತರ ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರು ಈ ತೆರಿಗೆ ಜಾಸ್ತಿ ಮಾಡಿದ ಬಗ್ಗೆ ವಿರೋಧ ಮಾಡಿ ಹಲವಾರು ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ರಾಜ್ಯಾದ್ಯಂತ

ಮುಂಬ್ಯರ ಮಾಡಿ ಥಿಯೇಟರಗಳನ್ನು ಬಂದ್ ಮಾಡಿದರು. ಬಂದ್ ಮಾಡಿದ ಮೇಲೆ ಚಳುವಳಿಯನ್ನೂ ನಿಲ್ಲಲಿಲ್ಲ, ಬೇಡಿಕೆಯೂ ಈಡೇರಲಿಲ್ಲ. ಹಲವಾರು ದಿನಗಳ ಬಳಿಕ ಮಾತುಕತೆ ಆದ ನಂತರ ಪರಿಹಾರ ಸಿಕ್ಕಿತು. ನಾವು ಪತ್ರಿಕೆಗಳಲ್ಲಿ ಓದಿದ್ದು ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರು ತೆಲುಗು ಸಿನೆಮಾಗಳಿಗೆ ರಿಯಾಯಿತಿ ಕೇಳುತ್ತಿದ್ದಾರೆ ಎಂದು. ಕನ್ನಡ, ತುಳು ಕೊಂಕಿಣಿ, ಕೊಡವ ಚಲನಚಿತ್ರಗಳಿಗೆ ಏನು ರಿಯಾಯಿತಿಯನ್ನು ಷೋ-ಟ್ಯಾಕ್ಸ್‌ನಲ್ಲಿ ಕೊಟ್ಟಿದ್ದಾರೆ ಇದು ನಿಜಕ್ಕೂ ಸ್ವಾಗತಾರ್ಹವಾದುದು. ವೆಂಕಟರಾಮಯ್ಯನವರು ಹೇಳಿದ ಹಾಗೆ ತೆಲುಗು ಚಿತ್ರಗಳಿಗೆ ರಿಯಾಯಿತಿ ಕೊಡಬೇಕೆಂದರೆ ತೆಲುಗ ಚಿತ್ರಗಳನ್ನು ತಯಾರಿಸುವುದು ಕರ್ನಾಟಕದಲ್ಲಿ ಅಲ್ಲ. ಹೆಚ್ಚಾಗಿ ತೆಲುಗು ಚಿತ್ರಗಳು ಆಂಧ್ರದಲ್ಲಿ ತಯಾರಾಗುತ್ತವೆ. ಮದ್ರಾಸ್‌ನಲ್ಲಿ ಮತ್ತು ಬಾಂಬೆಯಲ್ಲೂ ತಯಾರಾಗುತ್ತವೆ. ಒಟ್ಟಿನಲ್ಲಿ ಹೊರರಾಜ್ಯಗಳಲ್ಲಿ ತೆಲುಗು ಚಿತ್ರಗಳು ತಯಾರಾಗುತ್ತವೆ. ಅಲ್ಲಿ ಕೂಡ ಇದೇ ರೀತಿ ರಿಯಾಯಿತಿ ಕೊಟ್ಟರೆ ಇಲ್ಲಿರತಕ್ಕ ಸಿನೆಮಾ ಕೈಗಾರಿಕೆಗೆ ಹೊಡೆತ ಬೀಳುತ್ತದೆಂಬುದರಲ್ಲಿ ಅನುಮಾನವಿಲ್ಲ. ಷೋ-ಟ್ಯಾಕ್ಸ್ ಸಿನೆಮಾ ನೋಡುವ ಜನರ ಮೇಲೆ ಬೀಳುವುದಿಲ್ಲ, ಥಿಯೇಟರಿನ ಮಾಲೀಕರು ಕೊಡಬೇಕು ಇದರಿಂದ ಸರ್ಕಾರಕ್ಕೆ ಸ್ವಲ್ಪ ಆದಾಯ ಬರಲಿ ಎಂದು ಹೇಳಿದ್ದೀರಿ. ಅವರು ಜಾಸ್ತಿ ಮಾಡುವಾಗ ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರು ಒಪ್ಪಿ ಕೊಂಡಿದ್ದಾರೆ, ಅವರ ಒಪ್ಪಿಗೆ ಪಡೆದು ಜಾಸ್ತಿ ಮಾಡಿದ್ದೇವೆಂದು ಸದನಕ್ಕೆ ಹೇಳಿದ್ದರಿ. ಮಾಲೀಕರು ಮುಂಬ್ಯರ ಶರತ್ತು ಮಾಡಿದಾಗ ಕಡಿಮೆ ಮಾಡುತ್ತಿದ್ದೇವೆಂದು ಹೇಳಿದರಿ. ಒಮ್ಮೆ ಹೆಚ್ಚು ಮಾಡುವುದು, ಒತ್ತಡ ಬಂದಾಗ ಕಡಿಮೆ ಮಾಡುವುದು ! ಷೋ-ಟ್ಯಾಕ್ಸ್ ಜಾಸ್ತಿ ಮಾಡುವುದರಿಂದ ಸಿನೆಮಾ ಕೈಗಾರಿಕೆಗೆ ಅನ್ಯಾಯವಾಗುತ್ತದೆ ಮತ್ತು ಅದರಲ್ಲಿರತಕ್ಕ ಜನರಿಗೆ ಅನ್ಯಾಯವಾಗುತ್ತದೆಂಬ ಜ್ಞಾನೋದಯ ಮೊದಲೇ ಏತಕ್ಕೆ ತಮಗೆ ಆಗಲಿಲ್ಲ ? ಈಗಲಾದರೂ ಆಯಿತಲ್ಲ. ಸಿನೆಮಾ ಕೈಗಾರಿಕೆಯನ್ನು ಅವಲಂಬಿಸಿ ಲಕ್ಷಾಂತರ ಜನರು ಬದುಕುತ್ತಿದ್ದಾರೆ. ಇಂಥ ಒಂದು ನಿರ್ಧಾರವನ್ನು ತೆಗೆದುಕೊಳ್ಳಲಿಕ್ಕೆ ಏಕೆ ಅವಸರ ಮಾಡಿದಿರಿ ? ಇದನ್ನು ನಾನು ವಿರೋಧ ಮಾಡಬೇಕೆಂದು ಅಲ್ಲ. ಉಳಿದ ವಿಚಾರಗಳನ್ನೆಲ್ಲ ಖರ್ಗೆಯವರು ಮತ್ತು ಬಂಗಾರಪ್ಪನವರು ಮಾತನಾಡಿದ್ದಾರೆ. ಈಗ ರಿಯಾಯಿತಿ ಎಷ್ಟು ಸಿಗುತ್ತದೆಂದು ಹೇಳಿದ್ದೀರಿ. ಹತ್ತು ಸಾವಿರಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಿಗೆ ಈ ತೆರಿಗೆ ಇಲ್ಲವೆಂದು ತಿಳಿಸಿದ್ದೀರಿ,

ಶ್ರೀ ಎ ಲಕ್ಷ್ಮೀಸಾಗರ್.—೧೦ ಸಾವಿರ ಜನಸಂಖ್ಯೆ ಅಲ್ಲ. ಅದು ತಪ್ಪಾಗಿ ನಾನು ಹೇಳಿದ್ದೇನೆ. ಅದು ೧೫ ಸಾವಿರ. ದಯವಿಟ್ಟು ಆ ರೀತಿ ತಿದ್ದಿಕೊಳ್ಳಬೇಕು. ೧೫ ಸಾವಿರ ಜನಸಂಖ್ಯೆ ಇರತಕ್ಕ ನಗರಗಳಿಗೆ ಪೂರ್ತಿ ಷೋ ಟ್ಯಾಕ್ಸ್ ರಿಯಾಯಿತಿ ಇದೆ.

ಶ್ರೀ ಯು. ಭೂಪತಿ.—೧೫ ಸಾವಿರಕ್ಕಿಂತಲೂ ಕಡಿಮೆ ಜನಸಂಖ್ಯೆ ಇರುವ ಪ್ರದೇಶಗಳಲ್ಲೇ ಮೋಸ ನಡೆಯುವುದು. ಜನರ ಮೇಲೆ ಭಾರ ಬೀಳದೇ ಸಿನಿಮಾ ಥಿಯೇಟರ್ ಮಾಲೀಕನ ಮೇಲೆ ೧೦-೧೫-೨೫ ರೂಪಾಯಿಗಳು ಎಂದು ಹಾಕತಕ್ಕ ಷೋ ಟ್ಯಾಕ್ಸಿಗೆ ಏತಕ್ಕೆ ರಿಯಾಯಿತಿ ಕೊಟ್ಟಿದ್ದೀರಿ ? ಇಡೀ ರಾಜ್ಯಕ್ಕೆ ಒಂದೇರೀತಿ ಏತಕ್ಕೆ ಮಾಡುವುದಿಲ್ಲ ? ೧೫ ಸಾವಿರ ಜನರಿಗಿಂತ ಕಡಿಮೆ ಇರಪ ಪ್ರದೇಶಗಳಲ್ಲೇ ಹೆಚ್ಚು ಮೋಸ ನಡೆಯುವುದು. ಉದಾಹರಣೆಗೆ ನಮ್ಮ ಊರಿನಲ್ಲಿ ಒಂದು ಥಿಯೇಟರ್ ಇದೆ, ನಾನು ಇದನ್ನು ಹೋದಸಾರಿಯೂ ಹೇಳಿದ್ದೆ. ಅಲ್ಲಿ ೬ ವರ್ಷಗಳ ಹಿಂದೆ ಪ್ರಿಂಟ್ ಮಾಡಿದ ಟಿಕೆಟ್ಟೇ ಇನ್ನೂ ಇದೆ. ಜನತಾ ಟಾಕೀಸ್ ಎಂದು ಅದರ ಹೆಸರು. ಅದಕ್ಕೆ ನಾಲ್ಕು ಗೋಡೆ ಮಾತ್ರ ಇದೆ ಟಾಪ್ ಇಲ್ಲ. ಆದರೂ ಸಿನಿಮಾ ತೋರಿಸುತ್ತಾರೆ. ಅಲ್ಲಿ ಆರು ವರ್ಷಗಳಿಂದ ಯಾವ ಟಿಕೆಟ್ ಕೊಡುತ್ತಿದ್ದಾರೋ ಅದೇ ಟಿಕೆಟ್ ಇವತ್ತೂ ಕೊಡುತ್ತಿದ್ದಾರೆ. ಯಾವ ಅಧಿಕಾರಿಯೂ ಗೇಟ್ ತೆಗೆಯಿಸಿ ಥಿಯೇಟರ್ ಒಳಗೆ ಹೋಗಿ ನೋಡತಕ್ಕ ಧೈರ್ಯ ಮಾಡಿದ್ದನ್ನು ನಾನು ನೋಡಲಿಲ್ಲ. ಈ ರೀತಿಯ ಮೋಸಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಮಾಡುತ್ತಿದ್ದಾರೆ. ಎಂಟರ್‌ಟೈನ್‌ಮೆಂಟ್ ಟ್ಯಾಕ್ಸ್‌ನಿಂದಲೂ ತಪ್ಪಿಸಿಕೊಳ್ಳುತ್ತಿದ್ದಾರೆ. ಹೀಗಿರುವಾಗ ಷೋ ಟ್ಯಾಕ್ಸ್‌ನಿಂದ ಅವರಿಗೆ ರಿಯಾಯಿತಿ ಏತಕ್ಕೆ ಕೊಡುತ್ತೀರಿ ? ಇಡೀ ರಾಜ್ಯಕ್ಕೆ ಸರಿಸಮವಾಗಿ ಇದನ್ನು ಏತಕ್ಕೆ ಮಾಡುವುದಿಲ್ಲ ? ಇದರಿಂದ ಜನರ ಮೇಲೇನೂ ಭಾರ ಬೀಳುವುದಿಲ್ಲ. ಆದ್ದರಿಂದ ಯೂನಿಫಾರಮ್ಮಾಗಿ ರಾಜ್ಯದಲ್ಲಿ ಟ್ಯಾಕ್ಸ್ ಹಾಕಬೇಕೆಂದು ಹೇಳುತ್ತಾ ಮುಂದೆ ಈ ರೀತಿ ದರ ಏರಿಸುವಾಗ ಪರಿಣಾಮ ಏನಾಗುತ್ತದೆ ಎಂಬುದನ್ನು ಸಂಬಂಧಪಟ್ಟವರ ಜೊತೆ ಸವಾಲೋಚನೆ ಮಾಡಿ ಸರಿಯಾದ ನಿರ್ಣಯ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಮಹಮ್ಮದ್ ಬಿನ್ ತೊಗಲಕ್ ಸಾಮ್ರಾಜ್ಯದ ತರಹ ಕರ್ನಾಟಕ ರಾಜ್ಯ

ಆಗುತ್ತದೆ. ಆದಾಗುವುದು ಬೇಡ ಎಂದು ಸಲಹೆ ಮಾಡಿ ಈ ತಿದ್ದುಪಡಿಯನ್ನು ಸ್ವಾಗತ ಮಾಡುತ್ತೇನೆ.

ಶ್ರೀ ಕೆ. ಜೆ. ಜಾರ್ಜ್ (ಭಾರತೀನಗರ).—ನಮ್ಮ ಸರ್ಕಾರ ಯಾವರೀತಿ ಕೆಲಸ ಮಾಡುತ್ತಿದೆ ? ಒಂದು ಕಡೆ ಈ ಟ್ಯಾಕ್ಸ್ ಹೆಚ್ಚು ಮಾಡುವುದು, ಮುಷ್ಕರ ಹೂಡಿದಕೂಡಲೇ ಇಳಿಸುವ ಕೆಲಸವನ್ನು ಮಾಡುತ್ತಿದೆ. ಸಿನಿಮಾ ವಿಚಾರದಲ್ಲಿ ಮಾತ್ರವಲ್ಲ, ಟ್ರಾನ್ಸ್‌ಪೋರ್ಟ್ ವಿಚಾರದಲ್ಲೂ ಅದೇರೀತಿ ಯಾಗಿದೆ. ಅದೂ ಬಿಲ್ ಬರುತ್ತಿದೆ. ಈಗ ಕೊಡುತ್ತಿರುವ ರಿಯಾಯಿತಿ ೨ ಕೋಟಿ ರೂಪಾಯಿಗಳು ತಿಂಗಳುಗಟ್ಟಲೆ ಮುಷ್ಕರ ಮಾಡಿ, ಗಲಾಟೆ ಮಾಡಿದಮೇಲೆ ಈ ೨ ಕೋಟಿ ರೂಪಾಯಿಗಳ ತೆರಿಗೆಯನ್ನು ಇಳಿಸಿದ್ದಾರೆ. ಮೊದಲೇ ಚಿಂತನೆ ಮಾಡಿ ಜನರಿಗೆ ಆಗುವಂಥ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೆ ? ಈಗ ಇನ್ನೊಂದು ಹೇಳಿದ್ದಾರೆ. ಕೊಡವ, ಕೊಂಕಣಿ, ತಂಳು ಈ ಭಾಷೆಗೂ ರಿಯಾಯಿತಿ ಕೊಡುತ್ತೇವೆಂದು ಹೇಳಿದ್ದಾರೆ. ನಾನು ಹೇಳುತ್ತೇನೆ ಸಂಪೂರ್ಣವಾಗಿ ಇದರಮೇಲೆ ಹಾಕಿದಂಥ ದರವನ್ನು ಹಿಂದ ತೆಗೆದುಕೊಳ್ಳಬೇಕು. ಪಿಕ್ಚರ್‌ಗಳನ್ನು ತಯಾರು ಮಾಡುವುದೇ ಬಹಳ ಕಷ್ಟವಾಗುತ್ತಿದೆ. ಅವರು ಹಾಕಿದ ಹಣ ಹೋನಿಂದ ಬರುತ್ತಿಲ್ಲ. ಆದ್ದರಿಂದ ಸರ್ಕಾರ ಈ ದರವನ್ನು ಸಂಪೂರ್ಣವಾಗಿ ಹಿಂದೆ ತೆಗೆದುಕೊಳ್ಳಬೇಕು. ಮತ್ತೆ ಇನ್ನೊಂದು ವಿಚಾರ ನಮ್ಮ ರಾಜ್ಯದಲ್ಲಿ ಏರ್ ಕಂಡೀಷನ್ ಥಿಯೇಟರ್‌ಗಳನ್ನು ಕಟ್ಟಿದ್ದಾರೆ. ಆದರೆ ಎಲೆಕ್ಟ್ರಿಸಿಟಿ ಇಲ್ಲದಿರುವುದರಿಂದ ಏರ್ ಕಂಡೀಷನ್ ಆಫ್ ಮಾಡಿರುತ್ತಾರೆ. ಇದರಿಂದ ಥಿಯೇಟರುಗಳಲ್ಲಿ ಪಿಕ್ಚರ್ ನೋಡುವುದಕ್ಕೆ ಹೋಗುವ ಜನರಿಗೆ ತೊಂದರೆಯಾಗುತ್ತಿದೆ. ಅವರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಆಗುತ್ತಿದೆ ಆದ್ದರಿಂದ ಸಿನಿಮಾ ಥಿಯೇಟರ್ ಮಾಲೀಕರಿಗೆ ಒಂದು ರಿಸ್ಟ್ರಿಕ್ಷನ್ ಹಾಕಬೇಕು. ಸಂಪೂರ್ಣವಾಗಿ ವಿದ್ಯುಚ್ಛಕ್ತಿ ಸಾಧ್ಯವಾದರೆ ಕೊಡಿ. ಇಲ್ಲದಿದ್ದರೆ ಜನರೇಟರ್ ಆದರೂ ಅಳವಡಿಸಿಕೊಂಡು ಏರ್ ಕಂಡೀಷನ್ ಕೆಲಸ ಮಾಡುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸಾರ್ವಜನಿಕರಿಗೆ ತುಂಬಾ ಕಷ್ಟವಾಗುತ್ತದೆ. ಏರ್ ಕಂಡೀಷನ್ ಇಲ್ಲದೆ ವೆಂಟಿಲೇಷನ್ ಇಲ್ಲದೆ ತುಂಬಾ ತೊಂದರೆ ಆಗುತ್ತಿದೆ. ಇನ್ನೊಂದು ವಿಚಾರ ವೀಡಿಯೊ ಪಾರ್ಲರ್ ಬಗ್ಗೆ ಹೇಳಬೇಕೆಂದರೆ ಸಾವಿರ ರೂಪಾಯಿ ಗಳನ್ನು ಕೊಟ್ಟು ಲೈಸೆನ್ಸ್ ತೆಗೆದುಕೊಂಡು ಮನೆಯಲ್ಲಾಗಲೀ, ಷೆಡ್‌ನಲ್ಲಾಗಲೀ ಅಥವಾ ಗೋಡೌನ್ ನಲ್ಲಾಗಲೀ ವೀಡಿಯೊ ಪಾರ್ಲರ್ ಪ್ರಾರಂಭ ಮಾಡಬಹುದಾಗಿದೆ. ಇದರಿಂದ ಸರ್ಕಾರಕ್ಕೆ ಆದಾಯವೂ ಸರಿಯಾಗಿ ಬರುವುದಿಲ್ಲ ಥಿಯೇಟರ್‌ಗಳಲ್ಲಿ ಸಿನಿಮಾ ತೋರಿಸಬೇಕಾದರೆ ಆ ಸಿನಿಮಾ ಸೆನ್ಸಾರ್ ಬೋರ್ಡ್ ಸರ್ಟಿಫಿಕೇಟ್ ತೆಗೆದುಕೊಂಡಿರಬೇಕು. ಇದೆಲ್ಲಾ ರಿಸ್ಟ್ರಿಕ್ಷನ್ಸ್ ಇದೆ. ಆದರೆ ವೀಡಿಯೋ ಪಾರ್ಲರ್‌ಗೆ ಇದೆಲ್ಲವೂ ಇಲ್ಲ. ಇಲ್ಲಿ ಬ್ಲೂ ಫಿಲಂ ಕೂಡ ತೋರಿಸುತ್ತಿದ್ದಾರೆ. ಪೋಲೀಸ್ ಅಧಿಕಾರಿಗಳೂ ಇದರಲ್ಲಿ ಸೇರಿಕೊಂಡಿದ್ದಾರೆ. ಇಂಥ ವಿಚಾರದಲ್ಲಿ ಸರ್ಕಾರ ನಿಯಂತ್ರಣ ಮಾಡಿದರೆ ಸರ್ಕಾರಕ್ಕೆ ವರ್ಷಾನವೂ ಜಾಸ್ತಿಯಾಗುತ್ತದೆ. ಆದ್ದರಿಂದ ಸರ್ಕಾರ ಈ ವಿಚಾರದಲ್ಲಿ ಸೂಕ್ತ ಗಮನ ಇಟ್ಟು ಕ್ರಮ ಕೈಗೊಳ್ಳಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

೨-೩೦ ಪಿ. ಎಂ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು).—ಸನ್ಮಾನ್ಯ ಅಧ್ಯಕ್ಷರೆ. ಈ ಒಂದು ತಿದ್ದುಪಡಿ ವಿಧೇಯಕದ ಮೇಲೆ ೫ ಜನ ಸನ್ಮಾನ್ಯ ಸದಸ್ಯರುಗಳು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಈ ೫ ಸನ್ಮಾನ್ಯ ಸದಸ್ಯರುಗಳೂ ಈ ಒಂದು ತಿದ್ದುಪಡಿಗೆ ಸ್ವಾಗತವನ್ನು ಸೂಚಿಸಿದ್ದಾರೆ. ಸನ್ಮಾನ್ಯ ಭೂಪತಿಯವರು ವಿರೋಧ ಇಲ್ಲ ಎಂದು ಹೇಳಿದ್ದಾರೆ. ಅಂದರೆ ಇದರ ಅರ್ಥ ಇದನ್ನು ಅವರೂ ಸ್ವಾಗತ ಮಾಡಿದ್ದಾರೆಂಬುದು ನನ್ನ ಭಾವನೆ. ಅವರೆಲ್ಲರಿಗೂ ನನ್ನ ಧನ್ಯವಾದಗಳು. ನಂತರ ಅವರುಗಳು ಕೆಲವು ಸೂಚನೆಗಳನ್ನು, ಹಾಗೂ ಸಲಹೆ ಗಳನ್ನು ವ್ಯಕ್ತ ಮಾಡಿದ್ದಾರೆ. ಮುಖ್ಯವಾಗಿ ಬಂದಿರತಕ್ಕ ಸೂಚನೆಗಳು ತೆರಿಗೆ ವಸೂಲಾತಿಯಲ್ಲಿ ಲೋಪದೋಷಗಳು ಇರುವ ಕಾರಣ ಸರ್ಕಾರಕ್ಕೆ ನ್ಯಾಯವಾಗಿ ಬರಬೇಕಾದ ಆದಾಯ ಬರುತ್ತಿಲ್ಲ. ಸೋರಿ ಹೋಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಅರ್ಥ ಪೂರ್ಣವಾಗಿ ಇರತಕ್ಕ ವಿಚಾರ. ಇದನ್ನು ಗಮನದಲ್ಲಿಟ್ಟುಕೊಂಡು ಅದಷ್ಟು ವಸೂಲಾತಿ ಕಾರ್ಯವನ್ನು ಬಿಗಿ ಮಾಡುವುದಕ್ಕೆ ಸರ್ಕಾರ ಬಿಗಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತಿದೆಂದು ನಾನು ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಂತರ ೧೫ ಸಾವಿರ ಜನಸಂಖ್ಯೆ ಇರತಕ್ಕ ನಗರ ಪ್ರದೇಶಗಳಲ್ಲಿರುವ ಸಿನಿಮಾ

ಥಿಯೇಟರ್‌ಗಳಲ್ಲಿ ಳ ಭಾಷೆಗಳಲ್ಲಿ ತಯಾರಾದ ಇಲ್ಲಿಯೇ ತೋರಿಸತಕ್ಕ ಚಿತ್ರಗಳ ಮೇಲೆ ರಿಯಾಯಿತಿ ಯನ್ನು ಈ ಒಂದು ತಿದ್ದುಪಡಿಯಲ್ಲಿ ತೋರಿಸಿದ್ದೇವೆ. ೧೫ ಸಾವಿರ ಜನಸಂಖ್ಯೆಯನ್ನು ಏಕೆ ಇಟ್ಟು ಕೊಂಡಿದ್ದೀರಿ ? ಇದರಿಂದ ಒಂದೊಂದು ನಗರಕ್ಕೂ ತಾರತಮ್ಯವಾಗುವುದಿಲ್ಲವೇ ಎನ್ನತಕ್ಕ ಮಾತನ್ನು ಸನ್ಮಾನ ಸದಸ್ಯರುಗಳು ಹೇಳಿದ್ದಾರೆ. ನನ್ನ ಸಂತೋಷದ ಉತ್ತರ ಇಷ್ಟೆ. ೧೫ ಸಾವಿರ ಜನಸಂಖ್ಯೆ ಇರತಕ್ಕ ಪ್ರದೇಶದ ಸಿನಿಮಾ ಥಿಯೇಟರ್‌ಗಳಲ್ಲಿ ಟಿಕೆಟ್‌ಗಳ ಮೇಲೆ ತೆರಿಗೆಯನ್ನು ಹಾಕಿ ವುದಿಲ್ಲ. ಶೋ ಮೇಲೆ ತೆರಿಗೆಯನ್ನು ಹಾಕಿಂವಂಥಹದ್ದು. ಅವರು ಟಿಕೆಟ್‌ನ್ನು ಕೊಟ್ಟರೆ ಕೊಡ ಬಹುದು. ಕೊಡದೆ ಇದ್ದರೂ ಇರಬಹುದು ಈ ಅನುಕೂಲ ಇರುವುದರಿಂದ ಕಡಿಮೆ ಪ್ರಮಾಣದ ದರ ಗಳಲ್ಲಿ ಕನ್ನಡ ಚಿತ್ರಗಳನ್ನು ನೋಡುವವರಿಗೆ ಹೆಚ್ಚು ಅನುಕೂಲವಾಗುತ್ತದೆ ಎನ್ನತಕ್ಕಂತಹ ತಿಳಿವಳಿಕೆಯ ಮೇಲೆ ಇದನ್ನು ಮಾಡಿದ್ದೇವೆ.

ಶ್ರೀ ಯಂ. ಭೂಪತಿ.—ಶೋ-ಟ್ಯಾಕ್ಸ್ ಜನರ ಮೇಲೆ ಹಾಕುವಂಥದ್ದಲ್ಲ. ಥಿಯೇಟರ್ ಮಾಲೀಕರು ಕೊಡುವಂಥಹದ್ದು. ಅದಕ್ಕೂ ಏಕೆ ಇಷ್ಟೊಂದು ರಿಯಾಯಿತಿ ಕೊಟ್ಟಿದ್ದೀರಿ ಎಂಬುದೇ ನನ್ನ ವಾದ.

ಶ್ರೀ ಎ. ಲಕ್ಷ್ಮೀಸಾಗರ್.—ಅವರಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ.

ಶ್ರೀ ಯಂ. ಭೂಪತಿ.—ಯಾರಿಗೆ ? ಶೋಗೆ ೧೦ ರೂಪಾಯಿ ೧೫ ರೂಪಾಯಿಗಳನ್ನು ಕೊಡಿ ತ್ತಾರೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ಅವರೇ ಸಲಹೆ ಮಾಡಿದ ಮೇಲೆ, ಮಾಡಿದ್ದೇವೆ ಇನ್ನೊಂದು ವಿಷಯ ಏನೆಂದರೆ, ಕನ್ನಡ ಚಿತ್ರಗಳನ್ನು, ಳ ಭಾಷೆಗಳಲ್ಲಿ ಬರತಕ್ಕ ಹಾಗೂ ತಯಾರಾಗತಕ್ಕ ಸಿನಿಮಾಗಳಿಗೆ ಈ ಒಂದು ರಿಯಾಯಿತಿಯನ್ನು ತೋರಿಸಿದ್ದೇವೆ. ಅದೇ ರೀತಿ ತೆಲುಗಂ ಚಿತ್ರಗಳಿಗೂ ಏಕೆ ಕೊಡಬಾರದಂ ಎನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ರಾಜ್ಯದ ಹಾಗೂ ಸರ್ಕಾರದ ಅಧಿಕೃತ ಭಾಷೆ ಕನ್ನಡ. ಈ ಭಾಷೆಯಲ್ಲಿ ಹಾಗೂ ಕನ್ನಡ ಭಾಷೆಗಳಿಗೆ ಹೊಂದಿಕೊಳ್ಳು ವಂತಹ ನಮ್ಮ ರಾಜ್ಯದಲ್ಲಿ ಪ್ರಚಲಿತವಾದ ಭಾಷೆಯಲ್ಲಿಯೂ ಸಹ ಚಲನ ಚಿತ್ರಗಳನ್ನು ತಯಾರು ಮಾಡಿದರೆ, ಅವರಿಗೆ ಬೆಂಬಲ ಕೊಡತಕ್ಕ ಏಕೈಕ ಉದ್ದೇಶದಿಂದ ಇದನ್ನು ಮಾಡಿದ್ದೇವೆ. ಬೇರೆ ಯವರಿಗೆ ಈ ಒಂದು ಅನುಕೂಲವನ್ನು ಕೊಡತಕ್ಕ ಉದ್ದೇಶ ಸರ್ಕಾರಕ್ಕಿಲ್ಲ, ಇದರಿಂದ ತಾರತಮ್ಯ ವಾಗುತ್ತದೆಂದು ನನಗನ್ನಿಸುವುದಿಲ್ಲ ಇದು ಸಂವಿಧಾನಕ್ಕೂ ವಿರೋಧವಾಗಿಲ್ಲ ಎಂಬುದೂ ನನ್ನ ಭಾವನೆ. ಆ ರೀತಿ ಆಗಬಹುದಿಲ್ಲವೆಂದೂ ನಾನು ತಿಳಿದುಕೊಂಡಿದ್ದೇನೆ. ಶ್ರೀಮಾನ್ ವೆಂಕಟರಾಮಯ್ಯನವರೂ ತೆಲುಗಿನಲ್ಲಿ ತಯಾರಾಗತಕ್ಕ ಚಿತ್ರಗಳಿಗೂ ಈ ಒಂದು ಅನುಕೂಲವನ್ನು ಮಾಡಿ ಕೊಡಿ ಎಂಬುದಾಗಿ ಹೇಳಿದ್ದಾರೆ. ಅವರು ತೆಲುಗು ಹೆಚ್ಚು ಪ್ರಚಲಿತವಾದ ಪ್ರದೇಶದಿಂದ ಬಂದಿರತಕ್ಕವರು ಅವರು ಆ ರೀತಿ ಕೇಳುವುದೂ ಸ್ವಾಭಾವಿಕ. ಅದೇ ರೀತಿ ಶ್ರೀಮಾನ್ ಯಂ. ಭೂಪತಿಯವರೂ ಕೂಡ ಸ್ವಲ್ಪ ಮಟ್ಟಿಗೆ ಹೆಚ್ಚು ತೆಲುಗಂ ಭಾಷೆ ಮಾತನಾಡತಕ್ಕ ಜನರ ಪ್ರದೇಶದಿಂದ ಬಂದಿದ್ದಾರೆ. ಅವರೂ ಕೂಡ ಈ ಒಂದು ಸಲಹೆಯನ್ನು ಸರ್ಕಾರಕ್ಕೆ ನೀಡಿದ್ದಾರೆ. ಇದು ಸ್ವಾಭಾವಿಕ, ಇದು ತಪ್ಪೆಂದು ನಾನಂ ಹೇಳುವುದಿಲ್ಲ. ಆದರೆ ಸರ್ಕಾರದ ಉದ್ದೇಶ ಕನ್ನಡ ನಮ್ಮ ರಾಜ್ಯ ಭಾಷೆ, ಈ ಪ್ರಚಲಿತ ಭಾಷೆಯೊಳಗೆ ಮತ್ತು ಭಾಷೆಯಲ್ಲಿ ತಯಾರಾಗತಕ್ಕ ಚಿತ್ರೋದ್ಯಮಿಗಳಿಗೆ ಹಾಗೂ ಚಲನ ಚಿತ್ರಗಳಲ್ಲಿ ಭಾಗವಹಿಸತಕ್ಕವರಿಗೆ ಅನುಕೂಲ ಮಾಡಿಕೊಡತಕ್ಕ ಒಂದು ಪ್ರಯತ್ನ ಇದು,

ಒಂದೊಂದು ಸಮಯದಲ್ಲಿ ಒಂದೊಂದು ಮಾತನ್ನು ಹೇಳುತ್ತೀರಿ ಎಂದು ಮಾನ್ಯ ಭೂಪತಿ ಯವರು ಹೇಳಿದರು. ತೆರಿಗೆ ವಿಷಯದಲ್ಲಿ ಕಟ್ಟುನಿಟ್ಟಾಗಿ, ಸರ್ವಕಾಲಿಕವಾಗಿ ಯಾವ ಅರ್ಥ ಶಾಸ್ತ್ರಜ್ಞನೂ ಇಲ್ಲಿಯವರೆಗೆ ಪ್ರಪಂಚದಲ್ಲಿ ನಿರ್ದೇಶನ ಮಾಡುವುದಕ್ಕೆ ಸಾಧ್ಯವಾಗಿಲ್ಲ.

ಶ್ರೀ ಯಂ. ಭೂಪತಿ.—ಕಳೆದ ಬಾರಿ ತಾವು ಶೋಟ್ಯಾಕ್ಸ್ ಹೆಚ್ಚ ಮಾಡುವಾಗ ಈ ಬಗ್ಗೆ ಫಿಲಂ ಛೇಂಬರ್ ಆಫ್ ಕಾಮರ್ಸ್‌ನವರನ್ನು ಕಾಂಟ್ಯಾಕ್ಟ್ ಮಾಡಿಯೇ ಇದನ್ನು ಮಾಡಿರುವುದು ಎಂದೂ ಹೇಳಿದಿರಿ. ಮತ್ತೆ ಅದನ್ನು ಫಿಲಂ ಛೇಂಬರ್ಸ್ ಆಫ್ ಕಾಮರ್ಸ್‌ನವರು ಏಕೆ ವಿರೋಧ ಮಾಡಿದರು ?

ಶ್ರೀ ಎ. ಲಕ್ಷ್ಮೀಸಾಗರ್.—ಯಾವ ಸಮಯದಲ್ಲೂ ಕೂಡಾ ಖಡಾಖಂಡಿತವಾಗಿ ತೆರಿಗೆ ವಿಚಾರದಲ್ಲಿ ಒಂದು ಸಮಯದಲ್ಲಿ ಇದ್ದದ್ದು ಇನ್ನೊಂದು ಸಮಯದಲ್ಲಿ ಇರುತ್ತದೆಂದು ಹೇಳಂವುದಕ್ಕಾಗುವುದಿಲ್ಲ. ಹಿಂದೆ ಹೀಗೆ ಹೇಳಿದ್ದಿರಿ ಎನ್ನುವ ವಾದ ತೆರಿಗೆಗಳಿಗೆ ಸಂಬಂಧಪಡುವುದಿಲ್ಲ, ಸಂಬಂಧಪಡಬೇಕಾಗಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇಂದ್ರ ಸರ್ಕಾರದವರು ಒಂದು ವರ್ಷದ ಹಿಂದೆ ಪೆಟ್ರೋಲ್, ಮತ್ತೊಂದರ ಬಗ್ಗೆ ದರವನ್ನು ಘೋಷಣೆ ಮಾಡಿದರು. ಮತ್ತೆ ಆ ಪಾರ್ಟಿಯು ಮಂಡಿಂಡಲೇ ಅದನ್ನು ಕಡಿಮೆ ಮಾಡಿಸಿದರು. ಮಾನ್ಯ ಸದಸ್ಯರಾದ ಜಾರ್ಜ್ ಅವರು ಲಾರಿಗಳಿಗೆ ಸಂಬಂಧಪಟ್ಟ ವಿಧೇಯಕದ ಬಗ್ಗೆ ಹೇಳಿದರು. ಕಾಲ, ದೇಶ, ವರ್ತಮಾನವನ್ನು ಗಮನದಲ್ಲಿಟ್ಟು ಕೊಂಡು ತೆರಿಗೆ ಹಾಕಬೇಕಾಗುತ್ತದೆ. ಉದ್ಯಮಿಗೆ ತೊಂದರೆ ಆಗದ ರೀತಿಯಲ್ಲಿ ತೆರಿಗೆ ಹಾಕುವುದು ಸಾಮಾನ್ಯವಾದ ಆರ್ಥಿಕ ನೀತಿ. ಒಂದೊಂದು ಸಲ ಇದೂ ಹೆಚ್ಚು ಕಡಿಮೆ ಆಗುತ್ತದೆ. ಆದುದರಿಂದ ಧಕ್ಕೆ ಬಾರದ ರೀತಿಯಲ್ಲಿ ತಿದ್ದುಪಡಿಯನ್ನು ಮಾಡಬೇಕಾಗುತ್ತದೆ. ಇದು ಎಲ್ಲಾ ದೇಶಗಳಲ್ಲೂ ಎಲ್ಲಾ ಸಮಯದಲ್ಲೂ ಇರತಕ್ಕದ್ದೇ. ಆದುದರಿಂದ ಹಿಂದೆ ಹೇಳಿದ್ದೀರಿ ಎಂದು ಹೇಳಿದರೆ ಅದು ಸರಿಯಾದ ವಾದವಾಗುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಜಾರ್ಜ್ ಅವರು ಇದನ್ನೆ ಕೇಳಿರುವುದರಿಂದ ಅವರಿಗೆ ಪ್ರತ್ಯೇಕವಾದ ಉತ್ತರ ಕೊಡಬೇಕಾಗಿಲ್ಲವೆಂದು ಭಾವಿಸುತ್ತೇನೆ. ನಿಮ್ಮೆಲ್ಲರ ಅಭಿಪ್ರಾಯಾದಂತೆ ಸರ್ಕಾರದ ಉದ್ದೇಶದಂತೆ ಇದನ್ನು ಮಾಡಿದ್ದೇವೆ. ಈ ಉದ್ಯಮದಲ್ಲಿರುವವರು ಸಂಪು ಹೂಡಿದಮೇಲೆ ಸರ್ಕಾರ ಇದನ್ನು ಮಾಡಿದೆ ಎಂದು ಹೇಳಿದಿರಿ. ಅನೇಕ ಸಂದರ್ಭಗಳಲ್ಲಿ ಹೀಗೆ ಮಾಡಬೇಕಾದ ಅವಶ್ಯಕತೆ ಇರುತ್ತದೆ. ಇದಕ್ಕೆ ಕಾರಣ. ಅವರ ಕಷ್ಟಸುಖಗಳನ್ನೂ ಗಮನದಲ್ಲಿಟ್ಟು ಕೊಂಡು ಮಾಡಬೇಕಾಗುತ್ತದೆ. ಇದೇನೂ ಹೊಸ ವಿಚಾರವಲ್ಲ. ಮತ್ತು ನಾವೊಬ್ಬರೇ ಈ ಕೆಲಸ ಮಾಡಿದ್ದೇವೆಂದಲ್ಲ. ಆದುದರಿಂದ ಜಾಣ್ಮೆಗೆ ಇದು ಒಂದು ಉತ್ತಮವಾದ ಉತ್ತರ.

ಶ್ರೀ ಯು. ಭೂಪತಿ.—"ಪುಷ್ಪಕ ವಿಮಾನ" ಚಿತ್ರದಲ್ಲಿ ಯಾವ ಭಾಷೆಯೂ ಇಲ್ಲ. ಇದನ್ನು ಕನ್ನಡ ಎಂದು ಕನ್ಸಿಡರ್ ಮಾಡುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಬಗ್ಗೆ ಪ್ರತ್ಯೇಕ ಪ್ರಶ್ನೆ ಕೇಳಿದರೆ ಉತ್ತರ ತರಿಸಿ ಕೊಡುತ್ತೇನೆ.

ಶ್ರೀ ಯು. ಭೂಪತಿ.—ಅದರಲ್ಲಿ ಯಾವ ಡಯಲಾಗ್ಸ್ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಚಲನಚಿತ್ರಗಳನ್ನು ನೋಡಿಯೇ ೩ ವರ್ಷಗಳಾದವು. ಈ ಬಗ್ಗೆ ನಾನು ವಿಚಾರ ಮಾಡಿ ಸರಿಯಾದ ಉತ್ತರ ಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗಲೇ ಯೋಚನೆ ಮಾಡಿದರೆ ಮತ್ತೊಂದಂ ತಿದ್ದುಪಡಿ ತರಂವುದು ತಪ್ಪುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ನೆನೆಸಿಕೊಂಡಾಗ ಕಾನೂನಿಗೆ ತಿದ್ದುಪಡಿ ತರತಕ್ಕದ್ದು ಬಂದ್ದಿವಂತರ ಲಕ್ಷಣ ಅಲ್ಲ. ಈ ಬಗ್ಗೆ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಇದು ಕಾನೂನಿನ ಚೌಕಟ್ಟಿನಲ್ಲಿ ಬರುತ್ತದೆಯೇ ಇಲ್ಲವೋ ಎಂದು ಯೋಚನೆ ಮಾಡಬೇಕು. ಇಲಾಖೆಯವರು ಈ ಬಗ್ಗೆ ಹೆಚ್ಚಿನ ಅನುಭವ ಪಡೆದಿರುತ್ತಾರೆ. ಅವರ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಉತ್ತರ ಕೊಡಬೇಕಾಗುತ್ತದೆ. ಈ ಬಗ್ಗೆ ಕೇಳಿದರೆ ಪ್ರತ್ಯೇಕ ಉತ್ತರವನ್ನು ಒದಗಿಸಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ತಿದ್ದುಪಡಿ ತರುವ ಸಂದರ್ಭದಲ್ಲಿ ಮಾತು, ಹಾಡು ಹಾಗೂ ಶಬ್ದಗಳು ಇಲ್ಲದೇ ಇರುವ ಚಿತ್ರ ಹಾಲಿ ಚಿತ್ರಮಂದಿರದಲ್ಲಿ ಪ್ರದರ್ಶಿತಗೊಳ್ಳುತ್ತಿದೆ. ಚಿತ್ರ ಮುಂದೆ ಬರುವಂತಹದ್ದು ಇದ್ದರೆ ಬೇರೆ ವಿಷಯ, ಹಾಲಿ ನಡೆಯುತ್ತಿರುವ ಚಿತ್ರವನ್ನು ಯಾವ ಭಾಷೆಯುದಂ ಎಂದಂ ತಿಳಿದುಕೊಳ್ಳಬೇಕು? ಹಾಲಿ ನಡೆಯುತ್ತಿರುವ ಚಿತ್ರದ ಬಗ್ಗೆ ಪರಿಶೀಲನೆ ಮಾಡುತ್ತೇವೆಂದು ಹೇಳಿದರೆ ಹೇಗೆ? ಇದನ್ನು ಕನ್ನಡ ಎಂದು ಕನ್ಸಿಡರ್ ಮಾಡುತ್ತೀರಾ? ಇದನ್ನು ಕನ್ನಡನಾಡಿನಲ್ಲಿ ಕನ್ನಡ ಎಂದು ಕನ್ಸಿಡರ್ ಮಾಡಿ. ತಮಿಳುನಾಡಿನಲ್ಲಿ ಇದನ್ನು ತಮಿಳು ಚಿತ್ರವೆಂದು ಕನ್ಸಿಡರ್ ಮಾಡಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಯಡಿಯೂರಪ್ಪನವರದು ತುಂಬಾ ಅವಸರದ ಪ್ರವೃತ್ತಿ, ನಾನು ಉತ್ತರ ಹೇಳಿದ್ದೇನೆ. ಮಾನ್ಯ ಭೂಪತಿಯವರು ಹೇಳಿದಂತಹ ವಿಚಾರವನ್ನು ನಾನು ಬೇಡವೆಂದು ಹೇಳಲಿಲ್ಲ. ಅದು ಕಾನೂನಿನ ಚೌಕಟ್ಟಿನೊಳಗಡೆ ಬಂದರೆ ಸೌಲಭ್ಯಕ್ಕೆ ಅರ್ಹವಾಗಿದೆಯೇ

ಎಂಬುದನ್ನು ತನಿಖೆಮಾಡಿ, ವಿಚಾರಮಾಡಿ ನಂತರ ಉತ್ತರ ಹೇಳುತ್ತೇನೆಂದು ಹೇಳಿದ್ದೇನೆ. ನನಗೂ ಅನೇಕ ವಿಚಾರಗಳು ಭಾಸವಾಗುತ್ತವೆ. ಮಂರ್ಷಾಲ್ಯು ವರ್ಷಗಳಿಂದ ನಾನು ಚಲನ ಚಿತ್ರಗಳನ್ನು ನೋಡಿಲ್ಲವೆಂದು ಹೇಳಿದ್ದೇನೆ. ಮಾನ್ಯ ಬಂಗಾರಪ್ಪನವರು ಈಗ ಸಭೆಯಲ್ಲಿಲ್ಲ, ನಾನು ಸಂಸಾರ ಸಮೇತ ಹೋಗಬೇಕೆನ್ನುವ ಪ್ರಶ್ನೆ ಬಂತು. ನಾನು ಸಿನಿಮಾ ನೋಡುವುದನ್ನು ಬಿಟ್ಟಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಭೂಪತಿಯವರು ಏನು ಸಲಹೆ ಮಾಡಿದ್ದಾರೆಂದರೆ, ನೀವು 'ಪುಷ್ಪಕ ವಿಮಾನ' ಎಂಬ ಚಲನಚಿತ್ರವನ್ನು ನೋಡಿ, ಅದರಲ್ಲಿ ಏನೂ ಇಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಸಿನಿಮಾದಲ್ಲಿ ನನಗೆ ಸ್ವಲ್ಪ ಇಂಟರೆಸ್ಟ್ ಕಡಿಮೆಯಾಯಿತು. ನನ್ನ ಸುತ್ತಮುತ್ತ ಇರತಕ್ಕ ಸಿನಿಮಾದಲ್ಲಿ ತೋರಿಸುವುದಕ್ಕಿಂದ ಇನ್ನೂ ಚೆನ್ನಾಗಿ ಕಾಣುತ್ತಿದೆ ಸಿನಿಮಾಕ್ಕಿಂಥ ಚೆನ್ನಾಗಿ ಭೋದಪ್ರದವಾಗಿದೆ, ಮನಸ್ಸಿಗೆ ರಂಜನೀಯವಾಗಿದೆ. ಮನಸ್ಸಿಗೆ ನೋವು ತರತಕ್ಕ ಸಜೀವನದ ಘಟನೆಗಳು ಪ್ರತಿದಿನ ಎಲ್ಲಾ ಹಂತಗಳಲ್ಲಿ ನೋಡತಕ್ಕ ಒಂದು ಮಾನಸಿಕ ಪ್ರವೃತ್ತಿಯನ್ನು ಪಡೆದು ಕೊಂಡಿದ್ದೇನೆ. ಆದರೆ ನಾಟಕ ಕೃತಕವಾದುದು. ಅದನ್ನು ನೋಡಿ ಮನೋರಂಜನೆ ಪಡೆಯತಕ್ಕ ಪ್ರವೃತ್ತಿಗೆ ನಾನು ಇತ್ತೀಚಿನ ದಿನಗಳಲ್ಲಿ ಹೋಗಿಲ್ಲ. ಮಾನ್ಯ ಸದಸ್ಯರ ಅಭಿಪ್ರಾಯಕ್ಕೆ ಬೆಂಬಲ ಸೂಚಿ ದ್ದೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ''ಗೌರವರ್ನರ ಇವರಿಯ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2ರಿಂದ 5ರವರೆಗೆ

ಅಧ್ಯಕ್ಷರು : ''ಖಂಡ 2ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 2ರಿಂದ 5ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟಿ ತು

ಖಂಡ 1 ಇತ್ಯಾದಿ :–

ಅಧ್ಯಕ್ಷರು : ಪ್ರಸ್ತಾವ ಏನೆಂದರೆ ''ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.''

ಪ್ರಸ್ತಾವನ್ನು ಅಂಗೀಕರಿಸಲಾಯಿತು

ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ಈ ವಿಧೇಯಕಕ್ಕೆ ಸೇರಿಸಲಾಯಿತು.

ಪ್ರಸ್ತಾವದ ಅಂಗೀಕಾರ

ಶ್ರೀ ಎ. ಲಕ್ಷ್ಮೀಸಾಗರ್.—(ಕಾನೂನು, ಸಂಸದೀಯ ಸಚಿವರು) ಗೌರವರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ ''ಗೌರವರ ಕರ್ನಾಟಕ ಮನರಂಜನಾ ತೆರಿಗೆ (ತಿದ್ದು ಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು.''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಂಸೂದೆಗೆ ಒಪ್ಪಿಗೆನೀಡಲಾಯಿತು.